ಕೃಷಿ ಸಮಾನ ಪದಗಳ ಸಮೀಕ್ಷೆ

ಪ್ರಾಯೋಜನೆ ಮುಂದಾಳು : ಎಚ್ ಕೆ ನರಸಿಂಹೇಗೌಡ
ಪ್ರಾಯೋಜನೆ ಸಹಭಾಗಿ : ಕೆ ಟಿ ಮೇಘರಾಜ

ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಪ್ರಕಟಣೆ—150

ಕೃಷಿ ಸಮಾನ ಪದಗಳ ಸಮೀಕ್ಷೆ

ಪ್ರಾಯೋಜನೆ ಮುಂದಾಳು : ಎಚ್. ಕೆ. ನರಸಿಂಹೇಗೌಡ
ಪ್ರಾಯೋಜನೆ ಸಹಭಾಗಿ : ಕೆ. ಟಿ. ಮೇಘರಾಜ

1986

ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು-560 065

ಕೃಷಿ ಸಮಾನ ಪದಗಳ ಸಮೀಕ್ಷೆ (ಕೃಷಿ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾಗದಿಂದ ಸಿದ್ಧಗೊಂಡು , ಪ್ರಕಾಶಿತ) ಪುಟಗಳು x+27
ಪ್ರಥಮ ಮುದ್ರಣ– 1986, ಪ್ರತಿಗಳು 1000,
ಬೆಲೆ-ರೂ. 5 –00

ಕೃಷಿ ವಿಶ್ವವಿದ್ಯಾನಿಲಯದ ಸಂಶೋಧನೆಯ ಅಂಗವಾಗಿ (ಪ್ರಾಯೋಜನೆಯ ಸಂಖ್ಯೆ: 957) ಇದು ಸಿದ್ಧಗೊಂಡಿದೆ.

ಮುದ್ರಣ

ಅನುಗ್ರಹ ಪ್ರಿಂಟರ್ಸ್
ನಂ, 1/1, 6ನೇ ಮುಖ್ಯರಸ್ತೆ, ಶಿವನಹಳ್ಳಿ
ರಾಜಾಜಿನಗರ, ಬೆಂಗಳೂರು-560 010

ಕುಲಪತಿಗಳ ಹಾರೈಕೆ

ಕೇಂದ್ರ ಸರ್ಕಾರದಿಂದ ಪುರಸ್ಕೃತಗೊಂಡ ಯೋಜನೆಯ ಆಶ್ರಯದಲ್ಲಿ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಕನ್ನಡದಲ್ಲಿ ಕೃಷಿ ವಿಜ್ಞಾನ ಪಠ್ಯಪುಸ್ತಕಗಳನ್ನು ಪ್ರಕಟಿಸುವ ಸಲುವಾಗಿ ಕನ್ನಡ ಅಧ್ಯಯನ ವಿಭಾಗ 1970 ರಲ್ಲಿ ಆರಂಭಗೊಂಡಿತು. ಅಲ್ಲಿಂದ ಇಲ್ಲಿಯವರೆಗೆ ಕೃಷಿ ವಿಜ್ಞಾನಗಳಿಗೆ ಸಂಬಂಧಿಸಿದ ಬೇಸಾಯ ಶಾಸ್ತ್ರ, ಪಶುಸಂಗೋಪನೆ ಹಾಗೂ ಪಶುವೈದ್ಯಕೀಯಶಾಸ್ತ್ರ, ಹೈನುಗಾರಿಕೆ, ತೋಟಗಾರಿಕೆ, ಕೋಳಿಸಾಕಣೆ, ಅರಣ್ಯಶಾಸ್ತ್ರ, ಗೃಹವಿಜ್ಞಾನ, ಮತ್ಸ್ಯಶಾಸ್ತ್ರ, ಕೃಷಿ ಸಹಕಾರ, ಜೇನುಸಾಕಣೆ, ರೇಷ್ಮೆ ವ್ಯವಸಾಯ, ಮೂಲ ವಿಜ್ಞಾನ ಹಾಗೂ ಮಾನವಿಕಶಾಸ್ತ್ರಗಳಲ್ಲಿ ನೂರಾರು ಪುಸ್ತಕಗಳು ಪ್ರಕಟಗೊಂಡಿವೆ. ಹಲವಾರು ವಿಷಯಗಳ ಮೇಲಿನ ತಾಂತ್ರಿಕ ಶಬ್ದಕೋಶಗಳು ನಿರ್ಮಾಣವಾಗಿವೆ. ಈ ಪೈಕಿ ಈಗಾಗಲೇ ಕೆಲವು ಪುಸ್ತಕಗಳು ಪುನರ್‌ಮುದ್ರಣಗೊಂಡಿವೆ. ಮತ್ತೆ ಕೆಲವು ಪುಸ್ತಕಗಳ ಪ್ರತಿಗಳು ಮುಗಿದಿದ್ದು, ಇವುಗಳಿಗಾಗಿ ಅಪಾರ ಬೇಡಿಕೆ ಉಂಟಾಗಿ ಪುನರ್ಮುದ್ರಣಗೊಳ್ಳಬೇಕಾಗಿದೆ. ಇದು ಈ ಪುಸ್ತಕಗಳಿಗಿರುವ ಜನಪ್ರಿಯತೆಗೆ ಸಾಕ್ಷಿ.

ಕೃಷಿ ವಿಜ್ಞಾನಗಳಲ್ಲಿ ಕೆಲವು ವಿಷಯದ ಮೇಲೆ ಹೆಚ್ಚಿನ ಪುಸ್ತಕಗಳು ಪ್ರಕಟಗೊಂಡಿದ್ದರೆ ಮತ್ತೆ ಕೆಲವು ವಿಷಯಗಳಲ್ಲಿ ಒಂದೋ ಎರಡೋ ಪುಸ್ತಕಗಳು ಮಾತ್ರ ಪ್ರಕಟಗೊಂಡಿವೆ. ಈ ದಿಶೆಯಲ್ಲಿ ಒಂದು ರೀತಿಯ ಸಮತೋಲನ ಕಾಯ್ದುಕೊಳ್ಳಬೇಕಲ್ಲದೆ ಇತ್ತೀಚೆಗೆ ಅತ್ಯಂತ ಮಹತ್ವಗಳಿಸುತ್ತಿರುವ ಹೈನುಗಾರಿಕೆ, ಕೋಳಿಸಾಕಣೆ ಹಾಗೂ ಮೀನುಗಾರಿಕೆ ವಿಷಯಗಳಿಗೆ ಸಂಬಂಧಿಸಿದ ಪುಸ್ತಕಗಳ ಪ್ರಕಟಣೆಗೆ ಆದ್ಯತೆ ನೀಡಿ ಉಪಯುಕ್ತತೆ ಕಂಡುಕೊಳ್ಳುವುದು ಅತ್ಯಗತ್ಯ.

ವಿಜ್ಞಾನ ಸಾಹಿತ್ಯ ಕನ್ನಡದಲ್ಲಿ ಬೆಳೆದು ಬರಬೇಕೆಂದು ನಡೆಯುತ್ತಿರುವ ಯತ್ನದಲ್ಲಿ ಕೃಷಿ ವಿಶ್ವವಿದ್ಯಾನಿಲಯದ ಈ ಕೊಡುಗೆ ಅಳಿಲು ಸೇವೆ. ಈ ಕೆಲಸ ಇದೀಗ ಮೈದುಂಬಿ ನಡೆಯುತ್ತಿದೆ. ಇದು ಇನ್ನೂ ತ್ವರಿತಗತಿಯಿಂದ ಸಾಗಬೇಕಾಗಿದೆ. ವಿಶಾಲವಾದ ಕೃಷಿ ವಿಜ್ಞಾನ ಪರಿಚಯ ಮಾಡಿಕೊಡಲು ಈಗ ಪ್ರಕಟಗೊಂಡಿರುವ ಪುಸ್ತಕಗಳು ಏತಕ್ಕೂ ಸಾಲದು. ಕೃಷಿ ವಿಜ್ಞಾನಗಳ ಒಂದೊಂದು ಶಾಖೆಯಲ್ಲೂ ನೂರಾರು ಪುಸ್ತಕಗಳು ಪ್ರಕಟವಾಗಬೇಕು; ಎಲ್ಲ ಶಾಖೆಗಳ ಮೇಲೂ ತಾಂತ್ರಿಕ

ಶಬ್ದಗಳು ಮೂಡಿಬರಬೇಕು. ಈ ದೃಷ್ಟಿಯಿಂದ ನೋಡಿದಾಗ ನಿಜವಾದ ಭೂಮಿಕೆಯಿದ್ದು ಭದ್ರವಾದ ಬುನಾದಿ ಇದೀಗ ಸಿದ್ಧವಾಗಿದೆ. ಅದರ ಮೇಲೆ ಇನ್ನೂ ಕಟ್ಟಡ ನಿರ್ಮಾಣವಾಗಬೇಕು.

ಕೃಷಿ ವಿಶ್ವವಿದ್ಯಾನಿಲಯದ ವ್ಯವಸಾಯ ಶಿಕ್ಷಣದಲ್ಲಿ ಕನ್ನಡ ಮಾಧ್ಯಮ ತರಗತಿಗಳಾಗಲೇ ಪ್ರಾರಂಭಗೊಂಡಿದ್ದು, ಕನ್ನಡದ ಬಗ್ಗೆ ಕಳಕಳಿಯುಳ್ಳ, ಆಸಕ್ತಿಯುಳ್ಳ ಅತ್ಯಂತ ಉತ್ಸಾಹಿ ವಿದ್ಯಾರ್ಥಿಗಳು ಈ ಪುಸ್ತಕಗಳ ಸದುಪಯೋಗ ಪಡೆಯುತ್ತಿರುವುದು ಅತ್ಯಂತ ಸಂತಸದ ಸಂಗತಿ.

ಈಗ ಪ್ರಕಟವಾಗುತ್ತಿರುವ **ಕೃಷಿ ಸಮಾನ ಪದಗಳ ಸಮೀಕ್ಷೆ** ಪುಸ್ತಕ ಎಲ್ಲ ವಿಜ್ಞಾನಿಗಳು, ತಂತ್ರಜ್ಞರು ಹಾಗೂ ವಿದ್ಯಾರ್ಥಿಗಳಿಗೆ ಪ್ರಯೋಜನಕಾರಿಯಾಗಲೆಂದು ಆಶಿಸುತ್ತೇನೆ.

ಗಾಂಧಿ ಕೃಷಿ ವಿಜ್ಞಾನ ಕೇಂದ್ರ
ಕೃಷಿ ವಿಶ್ವವಿದ್ಯಾನಿಲಯ
ಬೆಂಗಳೂರು-560 065

ಎಸ್. ವಿ. ಪಾಟೀಲ್
ಕುಲಪತಿಗಳು

ಸಂಪಾದಕರ ಮಾತು

ಪೀಠಿಕೆ

ಸಮಾನ ಪದವೆಂದರೆ ಹೆಸರೇ ಸೂಚಿಸುವಂತೆ ಸರಿಸಮನಾದ ಅರ್ಥವನ್ನು ಕೊಡುವ ಪದವೆಂದು ಅರ್ಥ. ಕರ್ನಾಟಕದಲ್ಲಿ ಪ್ರಾಂತಭೇದವನ್ನು ಅನುಸರಿಸಿ ಕನ್ನಡವನ್ನು ಮುಖ್ಯವಾಗಿ ಮೈಸೂರು ಕನ್ನಡ, ಧಾರವಾಡ ಕನ್ನಡ ಹಾಗೂ ಮಂಗಳೂರು ಕನ್ನಡವೆಂದು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ಈ ವಿಂಗಡಣೆ ಕೃಷಿಗೆ ಸಂಬಂಧಿಸಿದ ಪದಗಳಿಗೂ ಅನ್ವಯಿಸುತ್ತದೆ. ಅಂದರೆ ಕರ್ನಾಟಕದಲ್ಲಿ ಬೇಸಾಯಕ್ಕೆ ಅಂದರೆ ಉಳುಮೆ, ಬಿತ್ತನೆ, ಉಪಕರಣಗಳು ಇತ್ಯಾದಿಗಳಿಗೆ ಸಂಬಂಧಿಸಿ ದಂತೆ ಏಕರೀತಿಯ ಪದಗಳು ಬಳಕೆಯಲ್ಲಿರದೆ ಪ್ರಾದೇಶಿಕ ಭಿನ್ನತೆ ಅಥವಾ ವೈಶಿಷ್ಟ್ಯತೆ ಯನ್ನು ಅನುಸರಿಸಿ ಭಿನ್ನ ಭಿನ್ನ ಪದಗಳು ಬಳಕೆಯಲ್ಲಿರುವುದನ್ನು ಕಾಣುತ್ತೇವೆ.

ಉದ್ದೇಶ

ಕರ್ನಾಟಕದಲ್ಲಿ ಮುಖ್ಯವಾಗಿ ಮೈಸೂರು, ಧಾರವಾಡ ಹಾಗೂ ಮಂಗಳೂರು ಪ್ರದೇಶಗಳಲ್ಲಿ ಬಳಕೆಯಲ್ಲಿರುವ ಕೃಷಿಗೆ ಸಂಬಂಧಿಸಿದ ಸಮಾನ ಪದಗಳನ್ನು ಕಲೆ ಹಾಕುವುದೇ ಈ ಅಧ್ಯಯನದ ಉದ್ದೇಶ.

ಕಾರ್ಯವಿಧಾನ

ಮೊಟ್ಟಮೊದಲಿಗೆ ಮಂಗಳೂರಿನ ಕಡೆಯಲ್ಲಿ ಬಳಕೆಯಲ್ಲಿರುವ ಕೃಷಿಗೆ ಸಂಬಂಧಿ ಸಿದ ಪದಗಳನ್ನು ಕಲೆ ಹಾಕುವ ಪ್ರಯತ್ನ ಮಾಡಲಾಯಿತು. ಇದಕ್ಕಾಗಿ ಮಂಗಳೂರು ಜಿಲ್ಲೆಯ ಕೃಷಿಕರಿಂದ ಆ ಪ್ರದೇಶದಲ್ಲಿ ಬಳಕೆಯಲ್ಲಿರುವ ಕೃಷಿಗೆ ಸಂಬಂಧಿಸಿದ ಪದಗಳನ್ನು ಸಂಗ್ರಹಿಸಲಾಯಿತು. ಹೀಗೆ ಸಂಗ್ರಹಿಸಿದ ನಂತರ ಅವುಗಳೆಲ್ಲವನ್ನು ಕಾರ್ಡಿನಲ್ಲಿ ನಮೂದಿಸಲಾಯಿತು. ತದನಂತರ ಅವುಗಳಿಗೆ ಮೈಸೂರು ಹಾಗೂ ಧಾರವಾಡದ ಕಡೆಯ ಸಮಾನ ಪದಗಳನ್ನು ಸಂಗ್ರಹಿಸಿ ಇಲ್ಲಿ ಪಟ್ಟಿ ಮಾಡಲಾಗಿದೆ. ಒಂದೇ ಅರ್ಥವಿರುವ ಕೆಲವು ಪದಗಳಿಗೆ ಎಲ್ಲ ಪ್ರಾಂತಗಳಲ್ಲಿಯೂ ಭಿನ್ನ ಭಿನ್ನ ಪದಗಳು ಬಳಕೆಯಲ್ಲಿರುವುದನ್ನು ಕಾಣುತ್ತೇವೆ. ಉದಾ :

ಮೈಸೂರು	ಧಾರವಾಡ	ದಕ್ಷಿಣ ಕನ್ನಡ
ರಾಗಿಕಲ್ಲು	ಬೀಸೋಕಲ್ಲು	ಬೀಸು ಕಲ್ಲು

ಕೆಲವು ಪದಗಳಿಗೆ ಎರಡು ಪ್ರಾಂತಗಳಲ್ಲಿ ಒಂದೇ ಪದವನ್ನು ಬಳಸಲಾಗುತ್ತಿದ್ದು ಮತ್ತೊಂದು ಪ್ರಾಂತದಲ್ಲಿ ಭಿನ್ನಪದ ಬಳಸುತ್ತಿರುವುದು ಕಂಡು ಬರುತ್ತದೆ.

ಮೈಸೂರು	ಧಾರವಾಡ	ದಕ್ಷಿಣ ಕನ್ನಡ
ಬೆಳೆಸರದಿ	ಕಾಲುಗ್ಯೆ	ಬೆಳೆಸರದಿ

ಇದಲ್ಲದೆ ಒಂದು ಪ್ರಾಂತದಲ್ಲಿ ಒಂದು ಅರ್ಥವನ್ನು ಕೊಡುವ ಕೃಷಿ ಸಲಕರಣೆ ಮತ್ತೊಂದು ಪ್ರಾಂತದಲ್ಲಿ ಮತ್ತೊಂದು ಅರ್ಥ ಕೊಡುವುದನ್ನು ಕಾಣಬಹುದು. ಉದಾ: ಗುದ್ದಲಿ, ಮೈಸೂರು ಕಡೆ ಬಳಕೆಯಲ್ಲಿರುವ 'ಗುದ್ದಲಿ' ಎಂಬ ಸಲಕರಣೆಗೆ ಮಂಗಳೂರಿನ ಕಡೆಯವರು 'ಹಾರೆ' ಎಂದು ಕರೆಯುವುದು ರೂಢಿಯಲ್ಲಿದೆ.

ಒಟ್ಟಿನಲ್ಲಿ ಮಂಗಳೂರಿನ ಕಡೆಯಲ್ಲಿ ಸಂಗ್ರಹಿಸಿದ ಎಲ್ಲ ಕೃಷಿ ಪದಗಳ ಪೈಕಿ ಕೆಲವು ಪದಗಳಿಗೆ ಮೂರೂ ಪ್ರಾಂತಗಳ ಸಮಾನ ಪದಗಳು ದೊರೆತಿವೆ. ಮತ್ತೆ ಕೆಲವು ಪದಗಳಿಗೆ ದೊರೆತಿಲ್ಲ. ಇವಕ್ಕೆ ಕಾರಣ ಪ್ರಾಂತೀಯ ವೈಶಿಷ್ಟ್ಯವೇ ಹೊರತು ಬೇರೇನೂ ಇಲ್ಲ. ಉದಾಹರಣೆಗಾಗಿ ಧಾರವಾಡದ ಕಡೆಯಲ್ಲಿ ಬಳಕೆಯಲ್ಲಿರುವ 'ಮಡಿಕೆ' ಒಂದು 'ಅಕ್ಕಡಿ ಕಾಳು' ಈ ಬೆಳೆ ಆ ಪ್ರಾಂತದಲ್ಲಿ ಮಾತ್ರ ಬೆಳೆಯುತ್ತಿದೆ, ಇವನ್ನು ಮೈಸೂರಿನಲ್ಲಾಗಲಿ, ಮಂಗಳೂರಿನಲ್ಲಾಗಲಿ ಬೆಳೆಯುವುದಿಲ್ಲ ಹಾಗೂ ಬಳಸುವುದಿಲ್ಲ. ಆದ್ದರಿಂದ ಇವಕ್ಕೆ ಸಮಾನ ಪದ ಈ ಎರಡು ಪ್ರಾಂತಗಳಲ್ಲಿಯೂ ಸಿಗುವುದಿಲ್ಲ. ಇಂಥವು ಇನ್ನೂ ಕೆಲವು ಪದಗಳಿವೆ. ಇವುಗಳಿಗೆ ಸಮಾನ ಪದಗಳನ್ನು ಕಂಡುಹಿಡಿಯುವ ಪ್ರಯತ್ನ ಇನ್ನೂ ನಡೆಯಬೇಕು. ಈ ದೃಷ್ಟಿಯಿಂದ ನೋಡಿದಾಗ ನಾವು ಕೈಗೊಂಡ ಈ ಸಮೀಕ್ಷೆ ಅಪೂರ್ಣವೆಂದೇ ಹೇಳಬೇಕಾಗುತ್ತದೆ.

ಉಪಯುಕ್ತತೆ

ಕೃಷಿಗೆ ಸಂಬಂಧಿಸಿದ ಯಾವುದೇ ಒಂದು ಗ್ರಂಥವನ್ನು ರಚಿಸುವಾಗ ಆದರ ಗ್ರಂಥಕರ್ತ ಮೈಸೂರಿನವರಾಗಿದ್ದರೆ, ಮೈಸೂರಿನ ಕಡೆಯಲ್ಲಿ ಬಳಕೆಯಲ್ಲಿರುವ ಪದಗಳನ್ನೂ, ಧಾರವಾಡ ಹಾಗೂ ಮಂಗಳೂರಿನ ಕಡೆಯವರಾಗಿದ್ದರೆ ಆಯಾ ಪ್ರಾಂತಗಳಲ್ಲಿ ಬಳಕೆಯಲ್ಲಿರುವ ಪದಗಳನ್ನೂ ತಮ್ಮ ಗ್ರಂಥಗಳಲ್ಲಿ ಬಳಸಿರುತ್ತಾರೆ. ಹೀಗಾಗಿ ಮೈಸೂರಿನ ಕಡೆಯ ಗ್ರಂಥಕರ್ತೃ ಉಪಯೋಗಿಸಿದ ಕೃಷಿಗೆ ಸಂಬಂಧಿಸಿದ ಪದಗಳು ಧಾರವಾಡ ಹಾಗೂ ಮಂಗಳೂರಿನ ಕಡೆಯವರಿಗೆ ಅರ್ಥವಾಗುವುದಿಲ್ಲ ಹಾಗೂ ಧಾರವಾಡ ಹಾಗೂ ಮಂಗಳೂರಿನ ಕಡೆಯ ಗ್ರಂಥಕರ್ತೃಗಳು ಬಳಸಿರುವ ಪದಗಳು ಮೈಸೂರಿನವರಿಗೆ ಅರ್ಥವಾಗುವುದಿಲ್ಲ. ಇಂಥ ಒಂದು ತೊಡಕನ್ನು ನಿವಾರಿಸಲು ಈ 'ಕೃಷಿ ಸಮಾನ ಪದಗಳ ಸಮೀಕ್ಷೆ' ನೆರವಾಗುತ್ತದೆ. ಸಂಶೋಧನೆಯ ಫಲಿತಾಂಶ ರೈತರಿಗೆ ತಲುಪುವಂತೆ ಮಾಡುವುದೇ ಕೃಷಿ ವಿಶ್ವವಿದ್ಯಾನಿಲಯದಲ್ಲಿನ ವಿಸ್ತರಣಾ

ಸಾಹಿತ್ಯದ ಮುಖ್ಯ ಉದ್ದೇಶ. ಈ ಉದ್ದೇಶ ಸಫಲವಾಗಬೇಕಾದರೆ ವಿಸ್ತರಣ ಸಾಹಿತ್ಯ ನಿರ್ಮಾಪಕ ಮೂರು ಪ್ರಾಂತದ ರೈತರನ್ನು ಮನಸ್ಸಿನಲ್ಲಿಟ್ಟುಕೊಂಡು ಬರೆಯುವಾಗ ಇತರ ಸಮಾನ ಪದಗಳನ್ನು ಕಂಸದಲ್ಲಿ ಕೊಡಬೇಕಾಗುತ್ತದೆ. ಇಲ್ಲವೇ ಪ್ರತ್ಯೇಕ ಪ್ರಾಂತಗಳಿಗಾಗಿಯೇ ಸಾಹಿತ್ಯ ರಚನೆ ಕೈಗೊಂಡರೆ ಆಯಾ ಪ್ರಾಂತದಲ್ಲಿ ಬಳಕೆಯಲ್ಲಿರುವ ಪದಗಳನ್ನೇ ಬಳಸಬೇಕಾಗುತ್ತದೆ. ಈ ದೃಷ್ಟಿಯಿಂದಲೂ ಈ ಸಮೀಕ್ಷೆ ನೆರವಾಗುತ್ತದೆ. ಇದರಿಂದ ಕಾಲಾಂತರದಲ್ಲಿ ಭಾಷೆಯಲ್ಲಿನ ಪ್ರತ್ಯೇಕತೆಯನ್ನು ಕಡಮೆ ಮಾಡಲು ನೆರವಾಗುತ್ತದೆ. ಹೀಗಾಗಿ ನಾಡಿನ ಭಾಷೈಕ್ಯತೆಗೂ ಸಾಧ್ಯವಾಗುವುದು. ಇದರ ನೆರವಿನಿಂದ ರಾಜ್ಯದ ಯಾವುದೇ ಭಾಗದಲ್ಲಿ ನಿರ್ಮಿತವಾದ ಸಾಹಿತ್ಯದ ಪ್ರಯೋಜನ ಎಲ್ಲೆಡೆಯಲ್ಲಿಯೂ ಮಾಡಿಕೊಳ್ಳಲು ಸಹಾಯಕವಾಗುತ್ತದೆ. ಇವಲ್ಲದೆ ಬೇರೆ ಬೇರೆ ಪದ ಪ್ರಯೋಗಗಳ ಮೇಲಿಂದ ಕನ್ನಡ ಭಾಷೆಯ ಮೇಲೆ ಇತರ ಭಾಷೆಗಳಿಂದಾದ ಪ್ರಭಾವವನ್ನು ಗುರುತಿಸಲು ಸಹಾಯಕವಾಗುವುದು. ಈ ದಿಶೆಯಲ್ಲಿ ಹೆಚ್ಚಿನ ಸಂಶೋಧನೆಯನ್ನು ನಡೆಸುವವರಿಗೂ ಈ ಗ್ರಂಥ ನೆರವಾಗುತ್ತದೆ.

ಮುಂದಿನ ಸಂಶೋಧಕರಿಗೆ ಇದರ ಉಪಯೋಗ

ಈ ಸಮೀಕ್ಷೆ ಪರಿಪೂರ್ಣವಲ್ಲವೆಂಬ ಮಾತನ್ನು ಈಗಾಗಲೇ ಹೇಳಿದೆ. ಈ ಅಧ್ಯಯನವನ್ನು ಇನ್ನೂ ವ್ಯಾಪಕವಾಗಿ ಕೈಗೊಂಡು ಬೆಳೆಗೆ ಸಂಬಂಧಪಟ್ಟಂತೆ, ಉಪಕರಣಗಳಿಗೆ ಸಂಬಂಧಪಟ್ಟಂತೆ, ಕೃಷಿ ವಿಜ್ಞಾನದ ಎಲ್ಲ ರಂಗಗಳಿಗೆ ಸಂಬಂಧಪಟ್ಟಂತೆ ಪ್ರತ್ಯೇಕ ಸಮೀಕ್ಷೆ ನಡೆಸಿ ಕೃಷಿ ವಿಜ್ಞಾನದ ಆಯಾಯ ವಿಭಾಗಕ್ಕೆ ಸಂಬಂಧಪಟ್ಟಂತಹ ಸಮಾನ ಪದಗಳ ಪ್ರತ್ಯೇಕ ಗ್ರಂಥವನ್ನು ನಿರ್ಮಿಸುವುದು ಸಾಧ್ಯ.

ಈ ಪುಸ್ತಕದ ಪರಿಶೀಲನೆಯನ್ನು ಡಾ. ಕೆ. ಆರ್. ಕುಲಕರ್ಣಿ ಹಾಗೂ ಪ್ರೊ. ವೀ. ಸಿ. ಹಿತ್ತಲಮನಿಯವರು ಮಾಡಿದ್ದಾರೆ. ಇದರ ಕರಡೋದುವಿಕೆಯನ್ನು ವಿಭಾಗದ ಕರಡೋದುಗಾರರಾದ ಶ್ರೀ ಎಂ. ರಮೇಶ್ ಅವರು ನೆರವಾಗಿದ್ದಾರೆ. ಮುದ್ರಣಕ್ಕೆ ಸ್ವಚ್ಛ ಬೆರಳಚ್ಚು ಪ್ರತಿಯನ್ನು ಶ್ರೀ ಎಲ್. ಆರ್. ದೊಡ್ಡರಂಗಯ್ಯ ಅವರು ಸಿದ್ಧ ಪಡಿಸಿದ್ದಾರೆ. ಈ ಪುಸ್ತಕದ ಸಿದ್ಧತೆಯಲ್ಲಿ ಹಲವಾರು ಜನರು ನೆರವಾಗಿದ್ದಾರೆ. ಅವರಿಗೆಲ್ಲ ನಮ್ಮ ಕೃತಜ್ಞತೆಗಳು.

ಕನ್ನಡ ಅಧ್ಯಯನ ವಿಭಾಗ
ಗಾಂಧಿ ಕೃಷಿ ವಿಜ್ಞಾನ ಕೇಂದ್ರ
ಕೃಷಿ ವಿಶ್ವವಿದ್ಯಾನಿಲಯ
ಬೆಂಗಳೂರು-560 065

ಎಚ್. ಕೆ. ನರಸಿಂಹೇಗೌಡ
ಪ್ರಭಾರಿ ಕನ್ನಡ ಪ್ರಾಧ್ಯಾಪಕರು ಹಾಗೂ
ಕನ್ನಡ ಅಭಿವೃದ್ಧಿ ಸಮಿತಿ ಕಾರ್ಯದರ್ಶಿಗಳು

ಕೃಷಿ ಸಮಾನ ಪದಗಳ ಪರೀಕ್ಷೆ

ಕೃಷಿ ಸಮಾನ ಪದಗಳ ಸಮೀಕ್ಷೆ

	ಮೈಸೂರು	ದಕ್ಷಿಣ ಕನ್ನಡ	ಧಾರವಾಡ
A cattle which kicks when it is in pain or trouble	ಒದಕಲದನ, ಒದಿಯೋದನ, ಸಿಡರ್‌ಕಾಲ್‌ದನ	ಒದಿಯೋದನ, ಜಿಲ್ಲುನಿ (ತುಳು)	ಒದೆಯು ದನ
A clog tied to the neck of the cattle	ಗುದ್ದೆ, ದಂಡಿ	ಕುಂಟೆ	ಗುದ್ದಿ, ಗುದ್ದಲಿ
A coda of copper or brass	ಕೊಡ, ಚೌರಿಗೆ ಬಿಂದಿಗೆ, ಕೊಡಪಾನ	ಕೊಡ, ಕೊಡಪಾನ	ಕೊಡಪಾನ, ಬಿಂದಿಗಿ
A driving rain	ಇರಿಚಲು, ಎರಚಲು	ಇರಸಲು	ಇದಿರು ಮಳೆ
A frame thrown over houses to form the roof	ಚಪ್ಪರ	ಚಪ್ಪರ	ಹಂದರ
A frying pan of metal	ಬಾಣಲೆ, ಭಾಂಡ್ಲಿ	ಬಣಲೆ	ಬಾಣಲಿ
A globular copper or brass vessel	ಚಂಬು, ತಂಬಿಗೆ	ಚೆಂಬು	ವಾಟಿಣ ಚೆಂಬು, ಲೋಟಾ
A hen's nest	ಕೋಳಿ ಒಡ್ಡಿ, ಕೋಳಿ ಗೂಡು	ಕೋರ್ದ ಗೂಡು	ಕೋಳಿ ಮನಿ, ಕೋಳಿಗೂಡು
A kind of pap or porridge of jola, rice or ragi	ಅಂಬಲಿ	ಗಂಜಿ	ಅಂಬಲಿ, ಗಂಜಿ
A kind of rain (Ashlesh)	ಅಸ್ಲೆಮಳೆ	ಅಶ್ಲೇಮಳೆ	ಅಸಲಿ ಮಳೆ

	ಮೈಸೂರು	ದಕ್ಷಿಣ ಕನ್ನಡ	ಧಾರವಾಡ
A land mark (Boundry) stone	ಬಾಂದು ಕಲ್ಲು, ಸೀಮೆ ಕಲ್ಲು	ಬಾಂದುಕಲ್ಲು	ಬಾಂದ ಕಲ್ಲು
A large earthen pot with a broad mouth	ಬಾನಿ	ಮರ್ಗೈ	ಬಸಿಬಾನಿ
A large round boiler of copper	ಕಡಾಯು	ಕಡಾಯು	ಕೊಳಗ
A large wooden pestle for pounding rice and other things	ಒನಕೆ, ವನಕೆ	ಒನಕೆ, ಉಜ್ಜೇರು (ತುಳು)	ವಣಿಕಿ
A mat	ಮಂದಲಿಗೆ, ಚಾಪೆ	ಚಾಪೆ	ಹುಲ್ಲಿನ ಚಾಪೆ
A plate or pan for frying or baking	ದೋಸೆ ಹಲ್ಲೆ	ಕಾವಲಿ	ತವಿ
A prop for supporting the shafts of a carriage	ಮೇಳಿ, ಮೇಣಿ	ನೇಗಿಲ ಪುಡಿ, ನೇಗಿಲ ಹುಡಿ	ಮೇಳಿ, ಹಿಡಿಕಿ
A rope which is used to draw up water from the well by hand	ನೀರು ಸೇದೋ ಹಗ್ಗ, ಬಾವಿಹಗ್ಗ, ಬಾವಿಮಿಣಿ	ನೀರು ಸೇದೋ ಹಗ್ಗ	ಕಪ್ಪಲಿಹಗ್ಗ
A round brass or copper vessel	ಚರಿಗೆ, ದೇಕ್ಷ, ತಪ್ಪಲೆ	ಚರಿಗೆ	ತಂಬಿಗಿ, ಚೆರಿಗಿ
A small basket like thing which	ಬಾಯಿಕುಕ್ಕೆ, ಎತ್ತಿನ ಕುಕ್ಕೆ	ಬಾಯಿಕುಕ್ಕೆ	ಬಾಯಿಕಲ್ಲಿ, ಕುಕ್ಕಿ

	ಮೈಸೂರು	ದಕ್ಷಿಣ ಕನ್ನಡ	ಧಾರವಾಡ
will be tied to the mouth of the calf or cow or ox to prevent grazing			
A tub or a trough (cistern)	ತೊಟ್ಟಿ	ತೊಟ್ಟಿ	ಹೌದು
A wooden plate	ಮರಗೆ (ಅನ್ನ ಬಸಿಯುವಾಗ ಪಾತ್ರೆಯ ಬಾಯಿಗೆಹಾಕುವ ಬಸಿವಸ್ತು)	ಕುಡುಪು	ಚಿಬ್ಬಲ
A wooden taddle or spoon	ಸಟಗ	ಸಟಗ	ಹುಟ್ಟು
A young hen which has not started to lay the eggs	ಕಡತ	ತೆಲಾವು, ಲಾಕಿ (ತುಳು)	ಪಡ್ಡಿ ಕೋಳಿ
A whip	ಚಾವುಟಿ	ಬಾರುಕೋಲು	ಬಾರಕೋಲು
Amaranthus tricolor L. Amaranthaceae	ಹರಿವೆಸೊಪ್ಪು ದಂಟಿನಸೊಪ್ಪು	ಹರಿವೆಸೊಪ್ಪು	ಹರಿವಿಸೊಪ್ಪು
Ananas	ಪಟ್ಟೆಹಣ್ಣು ಅನಾನಸ್	ಅನಾನಸ್	ಅನಾನಸ್
An instrument on the principle of the lever for raising water	ಏತ	ಏತ	ಕಪ್ಪಲಿ (ಎತ್ತುಗಳಿಂದ ಎಳೆಯಲ್ಪಡುವುದು,) ಏತ, ಮೊಟ್ಟಿ (ಮಾನವ ಚಾಲಿತ)

	ಮೈಸೂರು	ದಕ್ಷಿಣ ಕನ್ನಡ	ಧಾರವಾಡ
An instrument which is used to level the land	ಓರೆಮಣೆ	ನೊಳ್ಳಿ	ಎಳೆಮಣಿ, ಕೊರಡು
An instrument which is used to turn upside down while preparing the pancake	ಮಗುಚೊಕ್ಕೈ, ಎತ್ತೊಕ್ಕೈ	ಮಗುಚಟಗ	ಮುಚ್ಚೋಕ್ಕೈ
Areca flower	ಹಿಂಗಾರ, ಹೊಂಬಾಳೆ	ಪಿಂಗಾರ	ಸಿಂಗಾರ
Areca sheath	ಅಡಿಕೆ ಹಾಳೆ	ಪಾಳೆ	ಅಡಿಕಿ ಹಾಳೆ
Backyard	ಹಿತ್ತಲು	ಹಿತ್ತಲು, ಹಿತ್ತಿಲು	ಹಿತ್ತಲ
Banana sucker	ಬಾಳೆಗಡ್ಡೆ, ಬಾಳೆದಿಂಡು, ಬಾಳೆಕಂದು	ಬಾಳೆಗಡ್ಡೆ	ಬಾಳೆಗಡ್ಡಿ, ಬಾಳೆಗುನ್ನಿ
Basket	ಹೆಡ್ಗೆ	ಹೆಡಿಗೆ	ಹೆಡಿಗಿ
Beam (Building)	ತೊಲೆ	ಪಕಾಸ್	ತೊಲಿ
Beam (Implement)	ಈಚು	ನೇಗಿಲ ಕಟ್ಟಿಗೆ	ಈಸು
Bed	ಮಡಿ, ಪಾತಿ	ಕಲ (ತುಳು)	ಮಡಿ
Bengal gram	ಕಡ್ಲೆ	ಕಡಲೆ	ಕಡಲಿ
Black pepper	ಮೆಣಸು	ಒಳ್ಳೆಮೆಣಸು, ಎಡ್ಡೆಮುಂಚಿ (ತುಳು)	ಕರಿಮೆಣಸು
Black soil	ಕಪ್ಪುಮಣ್ಣು, ಎರೇ ಮಣ್ಣು	ಕರಿಮಣ್ಣು	ಎರಿಮಣ್ಣು
Blouse	ರವಿಕೆ	ಕುಬಸ, ಕುಪ್ಪಸ	ಕುಪ್ಪಸ

	ಮೈಸೂರು	ದಕ್ಷಿಣ ಕನ್ನಡ	ಧಾರವಾಡ
Blunt spade	ಮೊಂಡುಗುದ್ದಲಿ	ಕುಂಟಾಣಿ	ಮಂಡಗುದ್ದಲಿ
Bolt	ತಾಳು, ತಾಳ, ಅಗುಳಿ	ತಾಳು	ತಾಳು
Boiled rice	ಕುಸಲಕ್ಕಿ, ಕುಚಲಕ್ಕಿ	ಕುಸುಬಲಕ್ಕಿ, ಕುಸಲಕ್ಕಿ	ಕುಸುಬಲಕ್ಕಿ
Boundry	ಹದ್ದು, ಅರಗು, ಎಲ್ಲೆ, ಬಾಂದು	ಬರಿ	ಬಾಂದು, ಹದ್ದು, ಗಡಿ, ಮೇರೆ
Bran	ತೌಟ್ಟು	ಉಮಿ	ತೌಡು
Brass plate	ತಾಂಬಾಳೆ	ಹರಿವಾಣ	ತಾಂಬಡಿ
Broadcasting	ಬೀರು, ಚೆಲ್ಲು, ಬಿತ್ತು	ಬಿತ್ತು	ಎರ್ಚು, ಚೆಲ್ಲು
Brinjal	ಬದನೆ	ಬದನೆ	ಮುಳಗಾಯಿ
Bund	ಏರಿ, ಬದು	ಪುಣಿ (ತುಳು)	ಒಡ್ಡು
Bunch	ಗೊನೆ	ಕೈಲು, ಗೊನೆ	ಗೊನಿ
Bundle	ಅರಿ, ಹೊರೆ	ಸೂಡಿ(ಸಣ್ಣದು) ಕಟ್ಟು (ದೊಡ್ಡದು)	ಸಿವುಡು(ಚಿಕ್ಕದು) ಪೆಂಡಿ (ಮಧ್ಯಮ ಗಾತ್ರದ್ದು) ಹೊರಿ (ದೊಡ್ಡದು)
Burnt	ಕರಿಕಾಗು, ಸೀದು ಹೋಗು	ಸುಟ್ಟುಹೋಗು, ಪೊತ್ತು ಪೋಣು (ತುಳು)	ಸುಟ್ಟುಹೋಗು
Carrot	ಕ್ಯಾರೆಟ್	ಗಜ್ಜರಿ	ಗಜ್ಜರಿ
Cart	ಗಾಡಿ	ಗಾಡಿ	ಚಕ್ಕಡಿ
Cart which is protected by sun and rain by tieing an archlike thing over it	ಕಮಾನುಗಾಡಿ	ಸವಾರಿಗಾಡಿ	ಕೊಲ್ಹಾರಿಚಕ್ಕಡಿ ಕೊಲ್ಹಾರಿ ಬಂಡಿ
Cattle urine	ಗಂಜಲ	ಗಂಜಲ	ಉಚ್ಚಿ

	ಮೈಸೂರು	ದಕ್ಷಿಣ ಕನ್ನಡ	ಧಾರವಾಡ
Chaffy	ಜೊಳ್ಳು (ಜಳ್ಳು)	ದಡ್ಡು	ಜಳ್ಳು
Charcoal	ಇದ್ದಿಲು	ಮಸಿಕೆಂಡ	ಇದ್ದಿಲ
Child care	ಮಕ್ಕಳಪಾಲನೆ	ಮಕ್ಕಳ ಜೋಪಾಸನೆ	ಮಕ್ಕಳ ಜೋಪಾನ ಮಾಡುವಿಕೆ
Chimney	ಚಿಮಣಿ	ಚಿಮಣಿ	ಹೊಗೆ ಕೊಳವಿ
Clay	ಜೇಡಿ	ಜೇಡಿ	ಎರಿ
Clod	ಹೆಂಟೆ, ಹೆಂಡೆ	ಹೆಂಟೆ	ಹೆಂಟಿ, ಹೆಂಡಿ
Close planting	ಗಿಜಗಲು ನಾಟಿ, ಕಿರಿನಾಟಿ	ಮಂದನಾಟಿ	ದಟ್ಟನಾಟಿ, ಅಡವ ಬಿತ್ತಗಿ
Coconut husk	ತೆಂಗಿನ ಸಿಪ್ಪೆ	ತೆಂಗಿನ ಸಿಪ್ಪೆ, ತೆಪ್ಪು (ತುಳು)	ಕತ್ತ, ತೆಂಗಿನ ಸಿಪ್ಪೆ
Cold climate	ತಂಡಿ ಹವಾಗುಣ, ಶೀತ ಹವಾಗುಣ	ತಂಡಿ ಹವಾಗುಣ	ತಂಡಿ ಹವಾ
Concentrated feed	ತಿಂಡಿ	ತಿನಿಸು	ತಿನುಸು
Compost	ಕರುಗುಣಿ ಗೊಬ್ಬರ	ಕಾಂಪೋಸ್ಟ್ ಗೊಬ್ಬರ	ಕಾಂಪೋಸ್ಟ್ ಗೊಬ್ಬರ, ಕೊಪ್ಪು ಸದೆ ಗೊಬ್ಬರ
Coriander	ಕೊತ್ತಂಬರಿ	ಕೊತ್ತಂಬರಿ	ಧನಿಯ, ಕೊತ್ತಂಬರಿ, ಹವೀಜ
Cow	ಹಸು	ದನ, ಪೆತ್ತ (ತುಳು)	ಆಕಳ
Cow pea	ತಡಗಣಿ	ಅಲಸಂದೆ	ಅಲಸಂದಿ
Cracked land	ಬೀಡುಸಳಿದ ಭೂಮಿ, ಬೀಡು ಬಿಗಿದ ಭೂಮಿ	ಬಿರುಕುಬಿಟ್ಟ ಭೂಮಿ	ಬೀಡು ಸಳಿದ ಭೂಮಿ
Crop rotation	ಬೆಳೆಸರದಿ	ಬೆಳೆಸರದಿ	ಕಾಲುಗೈ

	ಮೈಸೂರು	ದಕ್ಷಿಣ ಕನ್ನಡ	ಧಾರವಾಡ
Crow bar	ಹಾರೆ	ಸ್ಪಂಗೋಲು, ಸಬ್ಬಲ್	ಹಾರಿ
Crysanthemum flower	ಸಾವಂತಿಗೆಹೂವು, ಶಾವಂತಿಗೆಹೂವು	ಸಾವಂತಿಗೆ	ಸೇವಂತಿಗೆ
Cucumber	ಸವತೆಕಾಯಿ	ತೌತೆ	ಸವತಿ ಕಾಯಿ
Cultivation	ಬೇಸಾಯದ ಕಾರ್ಯ, ಆರಂಭದ ಕೆಲಸ	ಆರಂಭದ ಕೆಲಸ	ಆರಂಭ ಕಾರ್ಯ, ಸಾಗುವಳಿ ಕಾರ್ಯ
Curry	ಸಾಂಬಾರು	ಸಾಂಬಾರು, ಕೊದ್ದೆಲು (ತುಳು)	ಸಾಂಬಾರ, ಆಮ್ರ, ಹುಳಪಲ್ಲೆ ಸಾರು
Cynodon dactylon	ಗರಿಕೆ ಹುಲ್ಲು, ಹಂಚಿಕಡ್ಡಿ ಹುಲ್ಲು	ಗಡಿರಿಕೆಹುಲ್ಲು, ಕದಿಕೆಪಬೀಡ (ತುಳು)	ಕರಿಕೆ ಹುಲ್ಲು
Daily wage	ಕಂಬಳ	ದಿನಗೂಲಿ	ದಿನಗೂಲಿ
Dam	ಅಣೆಕಟ್ಟು	ಅಣೆಕಟ್ಟು	ಆಣಿಕಟ್ಟು, ನೀರೊಡ್ಡು
Date	ಕರ್ಜೂರ	ಕರ್ಜೂರ	ಕಜ್ಜೂರ
Deep rooted weed	ಆಳಕಳೆ	ಆಳಕಳೆ	ನಟ್ಟು (ಕರಿಕೆಗೆ ಸಂಬಂಧ ಪಟ್ಟಂತೆ)
Dew	ಇಬ್ಬನಿ, ಮಂಜು	ಮಂಜು	ಇಬ್ಬನಿ
Digging the soil	ಮಣ್ಣು ಅಗತೆ, ಮಣ್ಣು ಅಗೆ, ಮಣ್ಣು ಕಡಿಯುವುದು	ಮಣ್ಣು ಅಗತೆ	ಮಣ್ಣು ಅಗೇದು, ಮಣ್ಣು ಕಡೇದು
Dining plate	ಗಂಗಳ, ತಣಿಗೆ (ಕಂಚಿನದು), ಊಟದ ತಟ್ಟೆ	ಬಟ್ಟಲು, ತಟ್ಟೆ	ಗಂಗಾಳ, ತಾಟು, ಹರಿವಾಣ

	ಮೈಸೂರು	ದಕ್ಷಿಣ ಕನ್ನಡ	ಧಾರವಾಡ
Dirty, unhygenic	ಹೊಲಸು, ಗಲೀಜು	ಗಲೀಜು, ಕೊಳಕು	ಹೇಸಿಗೆ,ಹೊಲಸು
Drain	ಚರಂಡಿ, ತೋಡು	ಚರಂಡಿ	ಗಟಾರ, ಕಾಲುವೆ
Drainage	ಬಸಿಗಾಲುವೆ, ಇಳಿತೋಡು	ತೋಡು, ಕಣಿ (ತುಳು)	ಇಳಗಾಲುವೆ, ಬಸಗಾಲುವೆ
Drainage water	ಜಿನುಗುನೀರು	ಒರತೆ ನೀರು	ಬಸಿನೀರು
Dryland	ಹೊಲ, ಖುಷ್ಕಿ ಜಮೀನು	ಬೊಟ್ಟುಗದ್ದೆ	ಮಳೆಯಿಂದ ಬೆಳೆಯುವ ಭೂಮಿ
Dry leaves	ಸೊಪ್ಪು, ದರಗು, ತರಗು	ತರಗೆಲೆ	ಒಣ ಎಲೆ
Dry leaf manure	ತರಗೆಲೆ ಗೊಬ್ಬರ	ಒಣಸೊಪ್ಪು ಗೊಬ್ಬರ	ತರಗಿನಗೊಬ್ಬರ (ಕಾರವಾರ)
Door	ಬಾಕ್ಲು, ಬಾಗಿಲು	ಬಾಗಿಲು	ಕದ
Dusting	ಧೂಳಿಸು	ಮದ್ದು ಪುಡಿ ಉದುರಿಸು	ಹುಡಿ ಹೊಡೇದು
Earhead	ತೆನೆ	ತೆನೆ, ಕುರಾಲು(ತುಳು), ಹೊಡೆ	ತೆನಿ
Earhead formation stage	ತೆನೆ ಒಡೆದ ಕಾಲ, ಹೊಡೆಬಂದಕಾಲ	ಹೊಡೆ ಬರುವಿಕೆ	ಹೊಡೆಬರುವ ಕಾಲ
Earth worm	ಎರೆಹುಳು, ನೆಂಜಲಹುಳು	ಎರೆಹುಳ	ಮಳೆಹುಳ
Elevated place	ಮಕ್ಕಿಬೋರೆ, ಬೋರೆ	ಕಲ್ಲುಗುಡ್ಡೆ	ಮುರಡಿ
Farmyard manure	ತಿಪ್ಪೆಗೊಬ್ಬರ, ಗುಂಡಿ ಗೊಬ್ಬರ, ಕೊಟ್ಟಿಗೆ ಗೊಬ್ಬರ, ಸಗಣಿ ಗೊಬ್ಬರ	ಕೊಟ್ಟಿಗೆ ಗೊಬ್ಬರ	ಸಗಣಿ ಗೊಬ್ಬರ, ತಿಪ್ಪಿ ಗೊಬ್ಬರ, ಹೆಂಡಿ ಗೊಬ್ಬರ, ದನದ ಗೊಬ್ಬರ,

	ಮೈಸೂರು	ದಕ್ಷಿಣ ಕನ್ನಡ	ಧಾರವಾಡ
Fat milk	ಬನಿಹಾಲು	ದಪ್ಪಹಾಲು	ಮಂದಹಾಲು, ಗಟ್ಟಿಹಾಲು, ದಪ್ಪಹಾಲು
Fencing	ಬೇಲಿಹಾಕು, ಮುಳ್ಳು ಚಾಚು, ಮುಳ್ಳುಹೊದಿಸು, ಒಡ್ಡು ಬಡಿ	ಮುಳ್ಳು ಹಾಕು	ಬೇಲಿಹಾಕು, ಬೇಲಿ ಹಚ್ಚು
Fertile soil	ಕಸುವು ಭೂಮಿ, ಫಲವತ್ತುಭೂಮಿ	ಫಲವತ್ತಾದ ಭೂಮಿ	ಬಲವಾದ ಭೂಮಿ, ಕಸುವಾದಭೂಮಿ
Fertilisers	ಸೀಮೆ ಗೊಬ್ಬರ, ರಸಗೊಬ್ಬರ	ಸೀಮೆ ಗೊಬ್ಬರ	ರಾಸಾಯನಿಕ ಗೊಬ್ಬರ, ಸರಕಾರಿ ಗೊಬ್ಬರ
Field boundry	ಹೊಲದ ತಲ ಕಟ್ಟು	ಹೊಲದ ಪುಣಿ, ಹೊಲದ ಹುಣಿ	ಹೊಲದ ವ್ಯಾರಿ
Field channel	ಕಡಿಗಾಲುವೆ	ಕಡಿಗಾಲುವೆ	ಹೊಲದ ಕಾಲುವೆ
Field encroch-ment	ಒತ್ತುವರಿ ಜಮೀನು	ಜಮೀನು ಒತ್ತುವರಿ	ಜಮೀನು ಒತ್ತು, ಜಮೀನುಸಾಧಿಸು
Field mouse	ತೋಡ	ಇಲಿ	ಗದ್ದೆ ಇಲಿ, ಹೊಲದ ಇಲಿ
Fire wood or Fuel wood	ಸೌದೆ, ಕಟ್ಟಿಗೆ	ಸೌದೆ	ಜಲಾವು, ಉರವಲು
Farmer (Agri-culturist, culti-vator)	ರೈತ, ಬೇಸಾಯಗಾರ, ವ್ಯವಸಾಯಗಾರ	ರೈತ	ಒಕ್ಕಲಿಗ, ರೈತ
Fragment land	ಕೋಗು ಭೂಮಿ, ತುಂಡು ಜಮೀನು	ತುಂಡು ಭೂಮಿ	ತುಂಡುಹೊಲ, ತುಂಡುಭೂಮಿ
Frame of bam-boos	ತಡಿಕೆ	ತಡಿಕೆ, ತಟ್ಟಿ	ನೆರಕಿ
Fruit collecting trap	ದೋಟಿ	ಕೊಕ್ಕೆ, ದೋಟಿ	ದೋಟಿ

	ಮೈಸೂರು	ದಕ್ಷಿಣ ಕನ್ನಡ	ಧಾರವಾಡ
Gardening	ತೋಟಗಾರಿಕೆ, ಹಕ್ಕಲುತನ	ತೋಟಗಾರಿಕೆ	ತೋಟಪಟ್ಟಿ
Ginger	ಶುಂಠಿ	ಶುಂಠಿ	ಅಲ್ಲ (ಹಸಿ) ಶುಂಠಿ
Girdle	ಪಟ್ಟಿ, ಡಾಬು	ಸೊಂಟದಪಟ್ಟಿ	ಪಟ್ಟಿ
Goat	ಆಡು, ಮೇಕೆ	ಆಡು	ಮೇಕಿ
Gross growing land	ಬ್ಯಾಣ, ಹಡ್ಲು	ಬಾಣಬೆಟ್ಟು	ಬೇಣ (ಕಾರವಾರ)
Grater	ತುರಿಯೋಮಣೆ	ಹೆರೆ ಮಣೆ, ಪೆರದಾನೆ	ತುರಿಮಣಿ
Gravel	ಧರೆ, ಕಲ್ಲುಮಣ್ಣು	ಹರಳು ಕಲ್ಲು	ಗರಸು
Gravelly soil	ಕಲ್ಲು ಮಣ್ಣು ಭೂಮಿ, ಧರೆ ಭೂಮಿ	ಮುರಕಲ್ಲು ಭೂಮಿ	ಗರಸುಭೂಮಿ, ಗೊರ್ಚುನೆಲ
Green manure	ಎಲೆ ಗೊಬ್ಬರ	ಸೊಪ್ಪಿನ ಗೊಬ್ಬರ	ಹಸುರೆಲೆ ಗೊಬ್ಬರ
Green vegetables	ಸೊಪ್ಪು ತರಕಾರಿ, ಸೊಪ್ಪಿಸಗಟು	ಸೊಪ್ಪು ತರಕಾರಿ	ಸಪ್ಪಿನ ಪಲ್ಲೆ, ತೊಪ್ಪಲ ಪಲ್ಲೆ
Grinding stone	ರಾಗಿಕಲ್ಲು	ಬೀಸೋಕಲ್ಲು	ಬೀಸುಕಲ್ಲು
Ground nut	ನೆಲಗಡಲೆ, ಕಡಲೆಕಾಯಿ	ನೆಲಗಡಲೆ	ಶೇಂಗಾ, ನೆಲಗಡಲಿ
Gully	ಕೊರಕಲು	ಕಣಿ	ಕೊರಕಲ
Hand threshing of paddy	ಬತ್ತ ಬಡಿಯುವುದು	ಬತ್ತ ಹೊಡೆಯುವುದು, ಕೈನೋಪಣೆ (ತುಳು)	ಬತ್ತ ಬಡಿಯುವುದು
Harvest	ಕುಯ್ಲು, ಸುಗ್ಗಿ	ಕುಯ್ಲು	ಕೊಯ್ಲು, ಸುಗ್ಗಿ

	ಮೈಸೂರು	ದಕ್ಷಿಣ ಕನ್ನಡ	ಧಾರವಾಡ
Harvesting season	ಸುಗ್ಗಿ ಕಾಲ, ಕುಯ್ಲು ಕಾಲ	ಕೊಯ್ಲು ಕಾಲ	ಸುಗ್ಗಿ ಕಾಲ
Hay stock	ಹುಲ್ಲುಮೆದೆ, ಬಣವೆ	ಗುಪ್ಪೆ	ಹುಲ್ಲುಬಣವಿ
Heap of cowdung	ಸಗಣಿಬಟ್ಟು	ಸಗಣಿರಾಶಿ	ಸಗಣಿ ಗುಡ್ಡ
Hen	ಕೋಳಿ, ಹೇಂಟೆ, ಹ್ಯಾಟೆ	ಕೋಳಿ, ಹೇಂಟೆ, ಕೋರಿ (ತುಳು)	ಕೋಳಿ, ಹೇಂಟಿ, ಹ್ಯಾಟಿ,
Hump	ಹಿಣಿಲು, ಡುಬ್ಬ, ಹೆರಳು	ಭುಜ	ಇಣಿ
Hunter	ಬಾರು ಕೋಲು, ಬಾರಿಕೋಲು	ಬಾರು ಕೋಲು	ಬಾರಕೋಲು
Increasing the fertility of the soil	ಭೂಮಿ ಫಲ ವತ್ತು ಮಾಡು, ಸಾರಹಾಕು	ಭೂಮಿ ಫಲ ವತ್ತು ಮಾಡು	ಭೂಮಿಕಸುವು ಮಾಡು, ಭೂಮಿ ಸಾರ ಹೆಚ್ಚಿಸು, ಭೂಮಿ ಫಲವತ್ತು ಮಾಡು
Intercrop	ಮಧ್ಯಬೆಳೆ	ಮಧ್ಯ ಬೆಳೆ	ಅಕ್ಕಡಿ ಬೆಳೆ
Iron needle used for stitching gunny bags	ದಬ್ಬಳ	ದಬ್ಬಳ	ದಬ್ಬಣ
Iron plough	ಕಬ್ಬಿಣದ ನೇಗಿಲು	ಕಬ್ಬಿಣದ ನೇಗಿಲು	ಕಬ್ಬಿಣರಂಟೆ
Irrigation facility	ನೀರಾವರಿ ಸೌಕರ್ಯ	ನೀರಾವರಿ ಅನುಕೂಲ	ನೀರಾವರಿ ಅನುಕೂಲ, ನೀರಿನ ಆಸ್ರ
Jowar stalk	ಜೋಳದಕಡ್ಡಿ	ಜೋಳದ ಹುಲ್ಲು	ಜೋಳದ ದಂಟು, ಜೋಳದ ಕಣಿಕೆ
Kharif crop	ಮುಂಗಾರು ಬೆಳೆ	ಏಣೇಲು ಬೆಳೆ	ಮುಂಗಾರಿ ಬೆಳೆ

	ಮೈಸೂರು	ದಕ್ಷಿಣ ಕನ್ನಡ	ಧಾರವಾಡ
Ladder	ಏಣಿ	ಏಣಿ, ಲಂಚಿ (ತುಳು)	ನಿಚ್ಚಣಿಕಿ
Land preparation	ಭೂಮಿ ಹದಗೊಳಿಸು	ಭೂಮಿ ಹದಮಾಡು	ಭೂಮಿ ತಯಾರಿಸು, ಭೂಮಿ ಸಿದ್ಧಪಡಿಸು
Levelling the soil	ಮಣೆ ಹೊಡೆಯುವುದು, ಮಟ್ಟ ಮಾಡುವುದು	ಹಲಗೆ ಹಾಕುವುದು	ಕೊರಡು(ಕೊಡ್ಡ) ಹೊಡೆ, ಭೂಮಿಸಾಫ್ (ಸಪಾಟ) ಮಾಡು
Liquid cowdung	ಸಗಣಿಬೊಗ್ಗಡ, ಬಗಡೆ	ಸಗಣಿ ನೀರು	ಸಗಣಿ ರಾಡಿ
Livestock	ಜಾನುವಾರು	ಜಾನುವಾರು, ಕೈಕಂಚಿ (ತುಳು)	ದನಕರು
Maidan region	ಮೈದಾನ ಪ್ರದೇಶ, ಬಯಲುಸೀಮೆ	ಮೈದಾನ ಪ್ರದೇಶ	ಬಯಲುಸೀಮೆ, ಬೆಳವಲ ಸೀಮೆ, ಬೆಳವಲ ನಾಡು
Main entrance	ದ್ವಾರ (ಹೆಬ್ಬಾಗಿಲು)	ಬಾಗಿಲು	ತಲಬಾಗಿಲು
Marshy land	ಹೂಳುನೆಲ, ಜೌಗುನೆಲ	ಜವಳು ನೆಲ	ಜವಳು ನೆಲ, ಜವಳು ಭೂಮಿ
Midrib of the coconut leaf	ಸೋಗಿನಕಡ್ಡಿ, ತೆಂಗಿನ ಕಡ್ಡಿ	ಸೀಂಕ್ ರ್ (ತುಳು)	ತೆಂಗಿನ ಕಡ್ಡಿ
Mold	ಬೂಷ್ಟು, ಮುಗ್ಗು	ಬೂಸ್ಲ	ಬುರಸು
Mud pot	ಹರ್ಬಿ, ಗಡಿಗೆ, ಹರಿವಿ	ಕರ (ಮಣ್ಣಿನದು)	ಕೊಡ, ಹರವಿ, ಗಡಿಗಿ
Nave of a wheel	ಗುಂಬ	ಗುಂಬ	ಗಡ್ಡಿ

	ಮೈಸೂರು	ದಕ್ಷಿಣ ಕನ್ನಡ	ಧಾರವಾಡ
Niger	ಹುಚ್ಚೆಳ್ಳು	ಎಳ್‌ವೆ	ಗುರೆಳ್ಳು
Node	ಗಣ್ಣು, ಗೆಣ್ಣು	ಗಂಟು	ಗಣ್ಣು, ಕಣ್ಣು
Nose string	ಮೂಗುದಾರ	ಮೂಗುನೇಣು	ಮುಗದಾಣ
Nursery bed	ಜೋಪಾಸನಾ ಮಡಿ, ಸಸಿಮಡಿ, ಒಟ್ಲುಪಾತಿ	ಮಡಿ, ಕಳ	ಅಗಿ ಮಡಿ
Nut cracker	ಪೆಂಟ್ಪುಗತ್ತಿ	ಮೆಟ್ಟುಗತ್ತಿ	ಅಡಕೊತ್ತು, ಮೆಟ್ಗತ್ತಿ
Nutrition food	ಪೌಷ್ಟಿಕ ಆಹಾರ, ಪುಷ್ಟಿದಾಯಕ ಆಹಾರ	ಒಳ್ಳೆ ಆಹಾರ	ಪೋಷಕ ಆಹಾರ
Onion	ಈರುಳ್ಳಿ, ಉಳ್ಳಿಗೆಡ್ಡೆ	ನೀರುಳ್ಳಿ, ಈರುಳ್ಳಿ	ಉಳ್ಳೀಗಡ್ಡಿ
Optimun sowing	ಹದಬಿತ್ತನೆ	ಸರಿಯಾದ ಬಿತ್ತನೆ	ಹದಬಿತ್ತನೆ
Over flow	ಕೋಡಿ ಬೀಳುವುದು	ತುಂಬಿಹರಿಯುವುದು	ತುಂಬಿಹರಿಯುವುದು, ಕೋಡಿ ಹರಿಯುವುದು
Palm leaf	ಸೋಗೆ, ಸೋಗ	ಸೋಗೆ	ಸಾಗಿ
Provision store	ದಿನಸಿ ಅಂಗಡಿ	ಜೀನಸು ಅಂಗಡಿ	ಕಿರಾಣಿ ಅಂಗಡಿ
Puddle	ಕೆಸರು, ಮಡ್ಡಿ	ಕೆಸರು	ಕೆಸರು, ಹುಂದಲು, ಅರಲು
Paddy	ಬತ್ತ	ನೆಲ್ಲು, ಬತ್ತ	ಬತ್ತ, ನೆಲ್ಲು
Paddy which has fragrance	ಗಮಸದ ಬತ್ತ, ಗಮಗಮನ ಬತ್ತ	ಗಂಧಸಾಲೆ	ವಾಸನೀ ಬತ್ತ

	ಮೈಸೂರು	ದಕ್ಷಿಣ ಕನ್ನಡ	ಧಾರವಾಡ
papaya	ಪರಂಗಿ ಹಣ್ಣು, ಪಪ್ಪಾಯಿಹಣ್ಣು	ಪರಂಗಿಹಣ್ಣು, ಅಕ್ಕತಂಗೀರಹಣ್ಣು, ಪಪ್ಪಂಗಾಯಿ (ತುಳು)	ಅಕ್ಕ ತಂಗೀರ ಹಣ್ಣು, ಪಪ್ಪಾಯಿ
Piece of dry wood	ಕೊಂಟು, ಕೊರಡು, ಮುಂಡು	ಮರದ ಕುಂಟೆ	ಒಣಕಟಿಗಿ ತುಂಡು
Pit	ಗುಣಿ, ಕುಳಿ, ಗುಂಡಿ	ಹೊಂಡ	ತಗ್ಗು, ಕುಣಿ, ಗುಂಡಿ
Plough	ನೇಗಿಲು, ಮಡಕೆ	ನೇಗಿಲು, ನಾಯೆರ್ (ತುಳು)	ರಂಟೆ, ನೇಗಿಲ
Ploughing for the first time in the begining of the cultivation every year	ತಾಡುಕ್ಕೆ, ಹೊಳಕೆ	ಮೊದಲ ಸಲ ಉಳುವುದು, ಸುರುದಪ್ಪುನಿ (ತುಳು)	ಮಾಗಿರಂಟೆ (ಬಿತ್ತದ ಬೆಳೆ ಕಟಾವು ನಂತರ)
Plough furrow	ನೇಗಿಲ ಸಾಲು	ನೇಗಿಲ ಬರಿ	ರಂಟೆ ಸಾಲು, ನೇಗಿಲ ಸಾಲು
Plough share	ಗುಳ, ಕುಳ	ಪಣೋಲು, ಕುಳ	ಕುಳ
Powdered stock (grass, leaves etc.)	ಪುಡಿಮೇವು, ದಪ್ಪಹೊಟ್ಟು	ಹೊಟ್ಟು	ಹೊಟ್ಟು
Pond (Artificial one)	ಹೊಂಡ, ಹಳ್ಳ	ಹಳ್ಳ	ಗುಂಡಿ, ಹೊಂಡ
Poultry excreta	ಕೋಳಿ ಕಸ	ಕೋಳಿಗೊಬ್ಬರ	ಕೋಳಿ ಹೇತಿಗೆ
Progressive farmer	ಸುಧಾರಿತ ರೈತ	ಪ್ರಗತಿಪರ ರೈತ	ಸುಧಾರಿಸಿದ ಒಕ್ಕಲಿಗ, ಪ್ರಗತಿಶೀಲರೈತ
Red soil	ಕೆಂಪು ಭೂಮಿ, ಕೆಮ್ಮಣ್ಣು ಭೂಮಿ	ಕೆಮ್ಮಣ್ಣು ಭೂಮಿ	ಮಸಾರಿ ಭೂಮಿ, ಕೆಂಪು ಭೂಮಿ

	ಮೈಸೂರು	ದಕ್ಷಿಣ ಕನ್ನಡ	ಧಾರವಾಡ
River bank	ಹೊಳೆದಂಡೆ, ಹೊಳೆದಡ	ನದಿದಡ, ಹೊಳೆದಡ	ನದಿ ದಂಡಿ, ಹೊಳಿ ದಂಡಿ
Rooler	ಕುಂಡ (ಹಪ್ಪಳದ)	ಲಟ್ಟಣಿಗೆ	ಲಟ್ಟಣಿಗಿ
Raby crop	ಹಿಂಗಾರು ಬೆಳೆ	ಸುಗ್ಗಿ ಬೆಳೆ	ಹಿಂಗಾರಿ ಬೆಳೆ
Rutting time (*time of being* ready for the bull)	ಬೆದೆಕಾಲ, ಅಡಗೆ ಬರುವಕಾಲ	ಜೋಡಿ ಹುಡುಕುವಕಾಲ	ಬೆದಿ ಕಾಲ
Saline land	ಕಲರ್ ಭೂಮಿ	ನಂಜು ಭೂಮಿ	ಕಲರ್ ಭೂಮಿ
Saline soil	ಕಲರ್ ಮಣ್ಣು, ಚೌಳು ಮಣ್ಣು	ನಂಜು ಮಣ್ಣು	ಕಲರ್ ಮಣ್ಣು, ಸವಳು ಮಣ್ಣು
Sand	ಮಳ್ಳು, ಮರಳು, ಮಳಲು	ಮರಳು, ಪೊಯ್ಯೆ (ತುಳು)	ಉಸುಕು, ಮರಳು
Sediment	ಗಷ್ಟ, ಚಲ್ಟ, ಗಸಿ	ಮಡ್ಡಿ	ಗಸಿ
Seed	ಬೀಜದ ಕಾಳು, ಬಿತ್ತನೆ ಕಾಳು	ಬಿತ್ತ್	ಬಿತ್ತುವ ಬೀಜ
Sowing	ಬಿತ್ತುವುದು	ಬಿತ್ತುನಿ	ಬಿತ್ತುವುದು
Seedling	ಸಸಿ, ಪೈರು	ಸಸಿ, ಗಿಡ	ಅಗಿ, ಸಸಿ
Servant	ಆಳು, ಕೆಲಸದವ, ಕೆಲಸದಾಳು	ಕೆಲಸದ ಆಳು	ಆಳು ಮಗ
Shaft of a cart	ದೂರಿ	ಸಬ್ಬಲ್	ಅಚ್ಚು
Short broom	ಮೋಟುಬಲರ್, ಮುಂಡಿ, ಮೋಟುಪರಕೆ	ಮುಂಡು ಪರಕೆ, ತುಂಡು ಪರಕೆ	ಮೋಟು ಕಸಬರಿಗೆ
Shovel	ಸನಿಕೆ	ಹಾರೆ	ಸಲಿಕಿ
Sieve	ಸಾಣಿಗೆ, ವಂದರಿ	ಜರಡಿ	ಜರಡಿ, ಜಲ್ಡಿ, ಸಾಣಿಗಿ
Silt	ಒಂಡು ಮಣ್ಣು	ಕೆರೆತಳ ಮಣ್ಣು	ಒಂಡು, ರೇವೆ

	ಮೈಸೂರು	ದಕ್ಷಿಣ ಕನ್ನಡ	ಧಾರವಾಡ
Slope (down)	ಉತಾರು, ಇಳುಕಲು, ಕಡಿದು, ಇಳಿಜಾರು	ಇಳಿಯುವುದು, ಇಳಿ ಜಾರು	ಇಳಕಲು, ಇಳಜಾರು, ಇಳಿಜಾರು
Small piece of wood	ಚಕ್ಕೆ	ಸಾದೆ ಚೂರು	ಚಕ್ಕಿ
Small plate	ಕೈ ಬಟ್ಟಲು	ಕೈಸಡ್ಡಿ	ಬಟ್ಟಲು
Snake gourd	ಪಡುವಲ ಕಾಯಿ	ಪಟ್ಲೆಕಾಯಿ	ಹಡುವಲ ಕಾಯಿ
Soil erosion	ಮಣ್ಣು ಕೊಚ್ಚಣೆ, ಮಣ್ಣು ಕೊರೆತ	ಮಣ್ಣು ಕೊರಿಯುವುದು	ಮಣ್ಣು ಸವಕಳಿ
Soil plate	ಮಣ್ಣು ಹೊಪ್ಪಳಿ, ಚಕ್ಕೆ	ಮಣ್ಣು ಹಕ್ಕಳಿ	ಮಣ್ಣು ಹಕ್ಕಳಿ
Sowing	ಬೀಜಬಿತ್ತು, ಬೀಜ ಎರಚು	ಬೀಜ ಹಾಕು	ಬೀಜ ಬಿತ್ತುವಿಕೆ, ಬೀಜ ಹಾಕುವಿಕೆ
Space above roof	ಅಟ್ಟ	ಅಟ್ಟ	ಅಟ್ಟದ ಮನೆ
Spade	ಗುದ್ಲಿ, ಗುದ್ದಲಿ	ಹಾರೆ, ಕೊಟ್ಟ (ಕುಳು)	ಗುದ್ದಲಿ
Split bamboo	ದಬ್ಬೆ	ಕಲಕೆ	ದಬ್ಬಿ
Spraying	ಸಿಂಪರಣೆ, ಸಿಂಪರಿಕೆ	ಮದ್ದು ಬಿಡುವುದು	ಸಿಂಪಡಿಸುವಿಕೆ
Sprayer	ಸಿಂಪರಕ ಪಂಪು	ಸ್ಪ್ರೇಯರ್	ಜೀಕಳಿ
Spreading the manure	ಗೊಬ್ಬರ ಎರಚುವುದು, ಗೊಬ್ಬರ ಬೀಸುವುದು	ಗೊಬ್ಬರ ಹಾಕುವುದು	ಗೊಬ್ಬರಹರಡುವಿಕೆ, ಗೊಬ್ಬರ ಚಲ್ಲುವಿಕೆ
Sprout	ಮೊಳಕೆ	ಮೊಳಕೆ	ಮೊಳಕಿ
ack	ಮೆದೆ	ಮೆದೆ	ಬಣವಿ

	ಮೈಸೂರು	ದಕ್ಷಿಣ ಕನ್ನಡ	ಧಾರವಾಡ
Sterile cow	ಗೊಡ್ಡು ಹಸು; ಗೊಡ್ಡಿ ಹಸ	ಗೊಡ್ಡಿ ಹಸ	ಗೊಡ್ಡ ಹಸ
Stick with hook	ಮೆರಿ ಕೋಲು, ನೆರಿ ಕೋಲು	ಬಾಚಿ	ನೆರಿಕೋಲು
Storage bin	ಕಣಜ, ಒಡ್ಡು	ಕಣಜ	ಕಣಜ, ವಾಡೆ
Storied building	ಮಹಡಿ ಮನೆ	ಉಪ್ಪರಿಗೆ ಮನೆ	ಅಟ್ಟದ ಮನಿ
Stone roller	ರೋಣುಗಲ್ಲು	ರೋಣುಕಲ್ಲು	ಕಲ್ಲಿನರೂಲು, ರೋಣುಗಲ್ಲು
Sucker	ಕಂದು	ಸಸಿ	ಮರಿ, ಗಡ್ಡಿ
Sultry	ಧಗೆ, ಝಳ	ಸೆಖೆ	ಸೆಕಿ, ಶೆಖೆ
Summer crop	ಕಾರು ಬೆಳೆ	ಕೊಳಕೆಬೆಳೆ	ಬೇಸಿಗೆ ಬೆಳೆ
Sun drying	ಬಿಸಿಲಿಗೆ ಹಾಕು, ಒಣಗು ಹಾಕು, ಆರು ಹಾಕು	ಒಣಹಾಕು	ಒಣಹಾಕು
Swampy land	ಜವುಗು ಭೂಮಿ, ಹೊಡ್ಲು, ಕಲ್ಪ ಭೂಮಿ	ಜವುಗು ಭೂಮಿ	ಜವಳು ಭೂಮಿ
Sweeping	ಹೊಟ್ಟು ಗುಡಿಸುವುದು, ಕಸ ಗುಡಿಸುವುದು, ಹೊಟ್ಟು ಹೊಡೆಯುವುದು, ಬಲ್ಲು ಹೊಡೆಯುವುದು	ಗುಡಿಸುವುದು	ಕಸಬಳುಡುಗು
Tank loam	ಕೆರೆಗೋಡು	ಕೆರೆಮಣ್ಣು	ಕೆರಿಮಂಡು, ಕೆರಿಹೂಳು
Tender coconut	ಎಳನೀರು, ಪೊಟ್ಟು	ಬೊಂಡ	ಎಳೆನೀರು
Tenency	ಗೇಣಿ, ಗುತ್ತಿಗೆ	ಗೇಣಿ	ಲಾವಣಿ
The gourd momordica monadelpha Roxb.	ತೊಂಡೆಕಾಯಿ	ಮಣೋಲಿ	ತೊಂಡಿಕಾಯಿ

	ಮೈಸೂರು	ದಕ್ಷಿಣ ಕನ್ನಡ	ಧಾರವಾಡ
The flower stalk; an ear of corn to begin to shootforth	ಹೊಡೆ, ಸೂಲಂಗಿ (ಕಬ್ಬಿಗೆ ಸಂಬಂಧಿಸಿದಂತೆ)	ಹೊಡೆ	ಹೊಡಿ
The pin of the axle of a cart	ಕಡಾಣಿ	ಕಡಾಣಿ	ಕೀಲು
The rind of sugar cane or the refuse of chewed sugar cane	ಕಬ್ಬಿನ ಸಿಪ್ಪೆ, ಅಳ್ಳಟ್ಟೆ	ಕಬ್ಬಿನ ಸಿಪ್ಪೆ	ಕಬ್ಬಿನ ರವದೆ, ಕಬ್ಬಿನ ಸಿಪ್ಪಿ
The shell of a coconut	ಕರಟ, ಕಂಟ	ಗೆರಟೆ (ತುಳು), ತಿಪ್ಪಿ	ಚಿಪ್ಪು
Threshing yard	ಕಣ	ಅಂಗಳ, ಜಾಲ್	ಕಣ
Tiller	ತೆಂಡೆ	ಪುಳ್ಳೆ	ಮರಿ, ಟಿಸಿಲು
Tillering	ಕವಲು ಒಡೆಯುವುದು, ತೆಂಡೆಒಡೆಯುವುದು	ಎಗ್ಗ ಒಡೆಯುವುದು	ಮರಿಒಡೆಯುವಿಕೆ
Timber piece of dry wood	ಮರದಕೊಂಟು ಕೊರಡು, ಮುಂಡು	ಮರದ ಕುಂಟೆ, ಮರದ ತುಂಡು	ಕಟ್ಟಿಗಿ ತುಂಡು
Tin plating	ಕಲಾಯಮಾಡಿಸುವುದು, ಲೇಪ ಹಾಕಿಸುವುದು	ಕಲಾಯಿ	ಕಲಾಯಿ ಮಾಡಿಸುವುದು
To expose to heat or steam	ಉಬ್ಬೆಹಾಕು, ಅಡೆಹಾಕು	ಉಬ್ಬೆಹಾಕು	
To pluck off the upper portion	ನೆತ್ತಿಚಿವುಟು	ಕುಡಿಚಿವುಟು	ಕುಡಿಚಿವುಟು
To prepare (chapati)	ಲಟ್ಟಿಸು	ಲಟ್ಟಿಸು	

	ಮೈಸೂರು	ದಕ್ಷಿಣ ಕನ್ನಡ	ಧಾರವಾಡ
To prepare jowar, rice, bread	ರೊಟ್ಟಿತಟ್ಟು	ರೊಟ್ಟಿತಟ್ಟು	ರೊಟ್ಟಿಬಡಿ, ರೊಟ್ಟಿಸುಡು, ರೊಟ್ಟಿಮಾಡು
To trim (Pruning)	ಸವರುವುದು	ಮೇಲ್ಕಡಿಕೆ	ಸವರು
To yoke	ಹೂಡು	ಹೂಡು, ಅಡಪು (ತುಳು)	ಹೂಡು
Transplanting	ನೆಡು, ನಾಟಿಮಾಡು	ನೆಡು, ನಾಟಿಮಾಡು, ನೆಜಿ (ತುಳು)	ನಾಟಿಮಾಡು, ನಾಟಿಹಚ್ಚು, ನೆಡು, ಸಸಿಹಚ್ಚು
Unriped fruit	ಕಸಗಾಯಿ, ದೋರಗಾಯಿ, ಕಸಗಟ್ಟಿಕಾಯಿ	ಚಿಗರುಕಾಯಿ, ದೋರೆಕಾಯಿ	ದ್ವಾರಿಗಾಯಿ, ಕಸಗಾಯಿ
Up	ಚಡಾವು	ಚಡಾವು	ಏರು
Upland	ಮಕ್ಕಿಗದ್ದೆ, ಬೋಕಿ ಭೂಮಿ	ಬೆಟ್ಟುಗದ್ದೆ	ಮ್ಯಾಗಟ್ಟಿ, ಮರಡಿ
Upper channel	ಏರುತೋಡು	ಮಿತ್ತಕಾಲುವೆ, ಮಿತ್ತತೋಡು	ಏರ್ಗಾಲುವೆ
Vegetable	ತರಕಾರಿ	ತರಕಾರಿ	ಕಾಯಿಪಲ್ಲೆ
Verandah	ಜಗಲಿ	ಜಗಲಿ	ಕಟ್ಟೆ
Virgin (Cow)	ಮಣಕ, ಕಡಸು, ಪಡ್ಡೆ	ಗಡಸು	ಮಣಕ, ಕೋರಿ
Waste land	ಬೀಳು ಭೂಮಿ, ಹಾಳು ಭೂಮಿ	ಹಾಳುಬಿದ್ದ ಭೂಮಿ	ಹಡಭೂಮಿ, ಬೀಳುಭೂಮಿ
Water channel or canal	ನೀರ್ಗಾಲುವೆ, ನಾಲೆ	ನೀರ್ಗಾಲುವೆ	ನೀರಿನಕಾಲುವೆ
Waterlogged irrigated field	ಹಳ್ಳದ ಗದ್ದೆ, ಕಲ್ಗಗದ್ದೆ	ಬಯಲುಗದ್ದೆ	ಅಲ್ಗಗದ್ದೆ, ಕೆಸರುಗದ್ದೆ
Water logged land	ಜವುಗುಭೂಮಿ, ಹೊಡ್ಲು	ಜೌಗುಭೂಮಿ	ಜವಳುಭೂಮಿ

	ಮೈಸೂರು	ದಕ್ಷಿಣ ಕನ್ನಡ	ಧಾರವಾಡ
Water melon	ಕಲ್ಲಂಗಡಿಹಣ್ಣು	ಬಚ್ಚಂಗಾಯಿ	ಕಲ್ಲಂಗಡಿಹಣ್ಣು
Water tap	ನಲ್ಲಿ, ಕೊಳಾಯಿ	ನಲ್ಲಿ	ನಳ
Wedge	ಬೆಣೆ	ಕೀಲು	ಬೆಣೆ
Weed	ಕಳೆ	ಪಂತಿ, ಕಳೆ	ಕಳೆಕಸ
Wet land or irrigated land	ಗದ್ದೆ	ಪಟ್ಲಗದ್ದೆ	ಗದ್ದೆ, ನೀರಾವರಿ ಜಮೀನು
Wet land to sow seed for raising seedlings	ಅಗೆಗದ್ದೆ	ಪಟ್ಲಗದ್ದೆ, ಮಜಲುಗದ್ದೆ	ಸಸಿಮಡಿ, ಅಗಿಮಡಿ
Wet place	ವದ್ದೆ ಜಾಗ, ತೇವದ ಜಾಗ	ಒದ್ದೆ ಜಾಗ	ತೇವದ ಜಾಗ
Winnow	ಕೇರು (ಮೊರದಿಂದ ಕೇರುವುದು)	ಕೇರು, ಪುಡುಪುನ (ತುಳು)	ಕೇರು
Winnowing	ತೂರು (ಬತ್ತ ಮೊದಲಾದವುಗಳನ್ನು ಜಳ್ಳಿನಿಂದ ಬೇರ್ಪಡಿಸಲು ಮೊರದಿಂದ ಗಾಳಿಯಲ್ಲಿ ತೂರುವುದು)	ಬೀಸು, ಬಾರದಕ್ಕನು (ತುಳು)	ತೂರು
Yield	ಇಳುವರಿ	ಇಳುವರಿ	ಉತ್ಪತ್ತಿ
Yoking	ಆರುಕಟ್ಟುವುದು	ಆರುಕಟ್ಟುವುದು, ಜೋಡುಹೊಡೆಯುವುದು	ಕೊಳ್ಳಕಟ್ಟು, ಹೂಡು

ಕನ್ನಡ ಅಧ್ಯಯನ ವಿಭಾಗದ ಪ್ರಕಟಣೆಗಳು

	ಸಾದಾ	ಕ್ಯಾಲಿಕೊ
1. ಸುಭಿಕ್ಷತೆಗೆ ತೆರೆದ ಬಾಗಿಲು (ದ್ವಿತೀಯ ಮುದ್ರಣ)	2–50	
2. ಪೀಡೆ ನಿರ್ವಹಣೆ (ದ್ವಿತೀಯ ಮುದ್ರಣ)	7–00	
3. ಕೀಟ ವಿಂಗಡಣೆ	15-00*	
4. ಕೀಟ ಹತೋಟಿ (ದ್ವಿತೀಯ ಮುದ್ರಣ)	12–50	
5. ಸಾಕುಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ, ಭಾಗ–1	6–25	
6. ತರಕಾರಿ ಬೇಸಾಯ	12–50*	
7. ಕೃಷಿ ರಸಾಯನಸಾಸ್ತ್ರ ಶಬ್ದಾರ್ಥ ನಿರೂಪಣಾವಳಿ	5–00	6-25*
8. ಮಣ್ಣು ಮತ್ತು ನೀರು ಸಂರಕ್ಷಣಾ ಕೈಪಿಡಿ	15–00	19–00
9. ರೈತರ ನೆಚ್ಚು ಮೆಚ್ಚಿನ ಮರಗಳು	15–00	19–00*
10. ಸಾಕುಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ, ಭಾಗ–2	11-25	15-00
11. ಬೀಜಗಣಿತ ಪರಿಚಯ (ಭಾಗ–1)	15–00	20–00
12. ಮಣ್ಣು ಮತ್ತು ನೀರು ನಿರ್ವಹಣೆ	15-00	19-00*
13. ಮಣ್ಣು	11–25	15–00*
14. ಕೃಷಿ ಸಹಕಾರ	6–25	10–00*
15. ಕಳೆಗಳು ಮತ್ತು ಕಳೆಗಳ ನಿಯಂತ್ರಣ	15–00	19–00
16. ಗೋಸಂಪತ್ತು	6–25	10–00
17. ಧಾನ್ಯದಾಸ್ತಾನು ತತ್ವ ಮತ್ತು ಪದ್ಧತಿಗಳು	7–50	11–25
18. ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆ	17–50	21–25*
19. ಪಶುವೈದ್ಯಕೀಯ ವಿಜ್ಞಾನ (ದ್ವಿತೀಯ ಮುದ್ರಣ)	6-00	16–00
20. ಹೊಲದ ಬೆಳೆಗಳಿಗೆ ಬೀಳುವ ಕೆಲವು ಕೀಟಗಳು	8-25*	12-00*
21. ಟ್ರ್ಯಾಕ್ಟರು ಹಾಗೂ ಅವುಗಳನ್ನು ಸುಸ್ಥಿತಿಯಲ್ಲಿಡುವ ಕ್ರಮಗಳು	7-50*	12–50*
22. ಸಾಕುಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ, ಭಾಗ–3	10–00	15–00
23. ಕೃಷಿ ವಿಸ್ತರಣ ಶಿಕ್ಷಣ ಪದ್ಧತಿಗಳು	11-25*	16–25*
24. ಕಣಜದ ಪೀಡೆಗಳು ಮತ್ತು ಅವುಗಳ ಹತೋಟಿ	15–00	19–00

* ಪ್ರತಿಗಳು ತೀರಿವೆ

	ಸಾದಾ	ಕ್ಯಾಲಿಕೊ
25. ಸಸ್ಯ ವರ್ಗೀಕರಣಶಾಸ್ತ್ರ	15–00	20–00
26. ಪೌಷ್ಟಿಕ ಆಹಾರ (ದ್ವಿತೀಯ ಮುದ್ರಣ)	6–00	16-00
27. ಕಡಲ ಮೀನುಗಾರಿಕೆ	5-00	10–00
28. ಧಾನ್ಯದ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	10–75*	
29. ಕಬ್ಬಿನ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	4–50*	
30. ಶಿಶುವಿಹಾರ (ದ್ವಿತೀಯ ಮುದ್ರಣ)	6-00	
31. ಬೇಳೆಕಾಳು ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	7–50*	
32. ಕೃಷಿ ಎಂಜಿನಿಯರಿಂಗ್ ಪಠ್ಯಪುಸ್ತಕ ಸಮೀಕ್ಷಣೆ	9–50	14–00
33. ಇಲಿಗಳು ಹಾಗೂ ಅವುಗಳ ನಿಯಂತ್ರಣ	9–50	13–25
34. ತರಕಾರಿ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	21–50*	
35. ಹಣ್ಣಿನ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	16–25*	
36. ಕ್ಯಾನಿಂಗ್-ಆಹಾರಜೋಪಾಸನೆಯ ಒಂದು ಆಧುನಿಕ ವಿಧಾನ	16-25	21–25
37. ಅಲಂಕಾರ ಸಸ್ಯಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	10-75*	
38. ಜೀವಕೋಶಕ್ರಿಯಾಶಾಸ್ತ್ರ ಮತ್ತು ಜೀವರಸಾಯನ ಶಾಸ್ತ್ರ	20-00	25-00
39. ಎಲುಬುಶಾಸ್ತ್ರ	11-25	16–25
40. ಕಡಲೆಕಾಯಿ	10–00*	15–00*
41. ಗಣಿತಶಾಸ್ತ್ರ ಪ್ರವೇಶಿಕೆ, ಭಾಗ-1	25-00	30–00
42. ತೆಂಗು, ಅಡಿಕೆ, ಇತರ ಗರಿಮರಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	9–00*	

* ಪ್ರತಿಗಳು ತೀರಿವೆ

	ಸಾದಾ	ಕ್ಯಾಲಿಕೊ
43. ಪ್ಲಾಂಟೇಶನ್ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	12-00*	
44. ಭಾರತದಲ್ಲಿ ಕೋಳಿ ಸಾಕಣೆ	22-50*	27-50*
45. ಕಲ್ಲುನಾರು (ಭೂತಾಳೆ) ಗಿಡಗಳು	5-00	
46. ಎಣ್ಣೆಬೀಜ(ಕಾಳು)ಗಳ ಬೆಳೆಗಳಿಗೆ ಬೀಳುವ ಕೀಟ ಹಾಗೂ ಅವುಗಳ ಹತೋಟಿ	7-50	
47. ಹತ್ತಿ (ನೂಲು) ಹಾಗೂ ನಾರಿನ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	10-00	
48. ಹಸುರೆಲೆ ಗೊಬ್ಬರ, ಮೇವು ಹಾಗೂ ಉಪ್ಪುನೇರಿಳೆ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	5-00*	
49. ಮಾದಕ(ಹೊಗೆಸೊಪ್ಪು, ಗಾಂಜಾ) ಮತ್ತು ಸಾಂಬಾರ (ಅರಿಶಿನ ಇತ್ಯಾದಿ) ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	3-75	
50. ಕೃಷಿ ಉಪಯೋಗಿ ಕೆಲವು ವೃಕ್ಷಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	4-50	
51. ಸಸ್ಯ ಸಾಮ್ರಾಜ್ಯ	25-00	30-00
52. ಮೀನುಗಾರಿಕೆ	10-00	15-00
53. ಭಾರತೀಯ ಗ್ರಾಮೀಣ ಯುವಕ ರೈತಸಂಘಗಳ ಸಂಘಟಣೆ	8-25	13-25
54. ಗಣಿತಶಾಸ್ತ್ರ ಪ್ರವೇಶಿಕೆ, ಭಾಗ-2	20-00	25-00
55. ಸಾವಯುವ ರಸಾಯನಶಾಸ್ತ್ರ ಪ್ರವೇಶಿಕೆ	14-00	19-00
56. ಪಶುರೋಗಗಳು ಮತ್ತು ಸಾರ್ವಜನಿಕ ಆರೋಗ್ಯ	12-50	17-50
57. ಭಾರತದಲ್ಲಿ ಜೇನು ಸಾಕಣೆ	20-00	25-00
58. ಸಾಕುಪ್ರಾಣಿ ಮೂಲದ ಸೋಂಕು ರೋಗಗಳು	7-50	12-00
59. ದೊಡ್ಡರೋಗ	5-00	
60. ಮೂಲ ಅರ್ಥಶಾಸ್ತ್ರ	19-00	24-00
61. ಜೇನುಸಾಕಣೆ	17-50	22-50

* ಪ್ರತಿಗಳು ತೀರಿವೆ

	ಸಾದಾ	ಕ್ಯಾಲಿಕೊ
62. ಕೃಷಿ ರಸಾಯನಶಾಸ್ತ್ರ ಪಾರಿಭಾಷಿಕ ಶಬ್ದಕೋಶ	3–25	
63. ಮಣ್ಣು ನಿರ್ವಹಣೆ, ಸಂರಕ್ಷಣೆ ಹಾಗೂ ಬೆಳೆ ಉತ್ಪಾದನೆ	20–00	25–00
64. ಕೃಷಿ ಅನಿಲಯಂತ್ರ ಹಾಗೂ ಟ್ರ್ಯಾಕ್ಟರುಗಳು		60–00
65. ಸಹಕಾರಿ ಬೇಸಾಯ	18–00	23–00
66. ಕೋಶ	20–00	25–00
67. ತರಕಾರಿ ಬೆಳೆಗಳ ಕೀಟ ನಿಯಂತ್ರಣ	12–50	19–00
68. ಸಾಕುಪ್ರಾಣಿಗಳ ಭ್ರೂಣಶಾಸ್ತ್ರ	20–00	25–00
69. ಸಂಸ್ಕೃತಿಯ ರೂಪಿಕೆಗಳು	19–00	22–00
70. ರೇಖಾತ್ಮಕ ಬೀಜಗಣಿತ	30–00	35–00
71. ಹುಲಿ– ಭಾರತದ ರಾಷ್ಟ್ರೀಯ ಮೃಗ	20–00	24–00
72. ನೀರಾವರಿ ತತ್ವ ಹಾಗೂ ಪದ್ಧತಿಗಳು	45–00	50–00
73. ಮಣ್ಣು ಶಿಲೀಂಧ್ರ ಕೈಪಿಡಿ	45–00	50–00
74. ಪ್ರಾಣಿಗಳ ವರ್ತನೆ	17–00	22–00
75. ಬೆಳೆ ಕೀಟಗಳು ಮತ್ತು ಅವುಗಳ ಹತೋಟಿ		125–00*
76. ಸಸ್ಯತಳಿ ಅಭಿವೃದ್ಧಿ ವಿಧಾನಗಳು		60–00
77. ಪ್ರಾಣಿಗಳ ಶರೀರಕ್ರಿಯಾಶಾಸ್ತ್ರ	17–00	22–00
78. ಆಹಾರ ಸೂಕ್ಷ್ಮಜೀವಿ ವಿಜ್ಞಾನದಲ್ಲಿ ಪ್ರಾಮುಖ್ಯತೆ ಗಳಿಸಿರುವ ಸೂಕ್ಷ್ಮಜೀವಿಗಳು (ಆಹಾರ ಸೂಕ್ಷ್ಮಜೀವಿ ವಿಜ್ಞಾನ (ಭಾಗ-1)	8–50	
79. ಕೆಲವು ಸಸ್ಯಗಳ ವೈಜ್ಞಾನಿಕ ಕುಟುಂಬ, ಇಂಗ್ಲಿಷ್ ಹಾಗೂ ಕನ್ನಡ ಹೆಸರುಗಳು	15–00	20–00
80. ಮೀನು ಮತ್ತು ಇತರ ಸಾಗರೋತ್ಪನ್ನ ಆಹಾರಗಳ ಶೀತಜೋಪಾಸನೆ	20–00	22–00
81. ಸಾಕುಪ್ರಾಣಿಗಳ ಕೀಲು ಮತ್ತು ಸ್ನಾಯುಶಾಸ್ತ್ರ	20–00	25–00
82. ಕುರಿಸಾಕಣೆ	8-00	13–00
83. ಜೋಳ	10–00	15–00
84. ಹಂದಿಯ ಭ್ರೂಣಶಾಸ್ತ್ರ	35–00	40–00
85. ಆಧುನಿಕ ಹೈನಾಗಾರ ದನಗಳ ನಿರ್ವಹಣೆ	25–00	30–00
86. ದಾಸ್ತಾನು ಕೀಟಗಳು ಹಾಗೂ ಅವುಗಳ ಹತೋಟಿ	8–00	

* ಪ್ರತಿಗಳು ತೀರಿವೆ.

	ಸಾದಾ	ಕ್ಯಾಲಿಕೊ
87. ಮನೆ ಕೀಟಗಳು ಇತರ ಪೀಡೆಗಳು ಹಾಗೂ ಅವುಗಳ ಹತೋಟಿ	10-00	
88. ಜಾನುವಾರು ಮತ್ತು ಮನುಷ್ಯರಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	10-00	
89. ತೆಂಗಿನ ಬೇಸಾಯ	9-00*	14-00*
90. ಆಹಾರ ರಕ್ಷಣೆ ಮತ್ತು ಕೆಡುವಿಕೆಯ ತತ್ವಗಳು (ಆಹಾರ ಸೂಕ್ಷ್ಮಜೀವಿ ವಿಜ್ಞಾನ, ಭಾಗ-2)	11-00	
91. ಸೂಕ್ಷ್ಮಜೀವಿಶಾಸ್ತ್ರದ ಬೆಳವಣಿಗೆ ಹಾಗೂ ವಿಧಾನಗಳು (ಸೂಕ್ಷ್ಮಜೀವಿ ಜಗತ್ತು, ಭಾಗ-1)	17-00	
92. ಕೃಷಿ ಸಸ್ಯಶಾಸ್ತ್ರ ಪಾರಿಭಾಷಿಕ ಶಬ್ದಕೋಶ	2-00	
93. ಹಸುರು ಸಸ್ಯದ ಜೀವನ	12-00	17-00
94. ಸೂಕ್ಷ್ಮಜೀವಿಗಳ ಚಯಾಪಚಯ(ಜೀವದ್ರವ್ಯ ಪರಿಣಾಮ) ಕ್ರಿಯೆಗಳು, ರಚನೆ ಮತ್ತು ಕಾರ್ಯಸಂಬಂಧ (ಸೂಕ್ಷ್ಮಜೀವಿ ಜಗತ್ತು, ಭಾಗ-2)	18-00	
95. ವಿವಿಧ ಆಹಾರಗಳು ಕಲುಷಿತವಾಗುವಿಕೆ, ಕೆಡುವಿಕೆ ಮತ್ತು ರಕ್ಷಣೆ (ಆಹಾರ ಸೂಕ್ಷ್ಮಜೀವಿ ವಿಜ್ಞಾನ, ಭಾಗ-3)	15-00	
96. ಸೂಕ್ಷ್ಮಜೀವಿಗಳು ಉತ್ಪತ್ತಿಮಾಡುವ ಆಹಾರಗಳು ಮತ್ತು ರಾಸಾಯನಿಕ ಕಿಣ್ವಗಳು (ಆಹಾರ ಸೂಕ್ಷ್ಮಜೀವಿ ವಿಜ್ಞಾನ, ಭಾಗ-4)	7-00	
97. ರೋಗಗಳಿಗೆ ಸಂಬಂಧಿಸಿದ ಆಹಾರಗಳು (ಆಹಾರ ಸೂಕ್ಷ್ಮಜೀವಿ ವಿಜ್ಞಾನ, ಭಾಗ-5)	5-00	
98 ಆಹಾರದ ನೈರ್ಮಲ್ಯ ನಿಯಂತ್ರಣ ಮತ್ತು ತನಿಖೆ (ಆಹಾರ ಸೂಕ್ಷ್ಮಜೀವಿ ವಿಜ್ಞಾನ, ಭಾಗ-6)	7-00	
99. ಕೃಷಿ ಕರ್ನಾಟಕ	12-50	17-50
100. ದಾಸ್ತಾನು, ಮನೆ, ಜಾನುವಾರು ಹಾಗೂ ಮನುಷ್ಯರಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		35-00
101. ಮತ್ಸ್ಯಶಾಸ್ತ್ರ		50-00

* ಪ್ರತಿಗಳು ತೀರಿವೆ

		ಸಾದಾ	ಕ್ಯಾಲಿಕೊ
102.	ಹಣ್ಣು ಮತ್ತು ತರಕಾರಿ ಸಂರಕ್ಷಣೆ	35–00	40–00
103.	ಫಾರ್ಮ್ ನಿರ್ವಹಣೆ ಅರ್ಥಶಾಸ್ತ್ರ		60–00
104.	ಆಹಾರ ಸೂಕ್ಷ್ಮಜೀವಿ ವಿಜ್ಞಾನ		62–50
105.	ಭಾರತದಲ್ಲಿ ಸಾಮಾಜಿಕ ಅರಣ್ಯಶಾಸ್ತ್ರ	25–00	35–00
106.	ಬತ್ತದ ಬೇಸಾಯ	15–00	25–00
107.	ಧಾನ್ಯದ ಬೆಳೆಗಳಿಗೆ ಬೀಳುವ ರೋಗಗಳು ಹಾಗೂ ಅವುಗಳ ಹತೋಟಿ	12–00	17–00
108.	ವ್ಯವಸಾಯ ಮುನ್ನಡೆ	18–00	28–00
109.	ಕೀಟಶಾಸ್ತ್ರ ಪಾರಿಭಾಷಿಕ ಶಬ್ದಕೋಶ	3–50	
110.	ಸಚಿತ್ರ ಬತ್ತದ ಬೆಳೆ	12–50	22–50*
111.	ಕೋಳಿಸಾಕಣೆ ಕೈಪಿಡಿ	10–00*	20–00*
112.	ಮಣ್ಣು ಸೂಕ್ಷ್ಮಜೀವಿಶಾಸ್ತ್ರ	10–00	20–00
113.	ಭೂಸಾರ ಸಂರಕ್ಷಣೆ	7–50	17–50
114.	ಬಿಳಿಕಸ	9–00	19–00
115.	ವೈರಸ್‌ಗಳು(ಸೂಕ್ಷ್ಮಜೀವಿಜಗತ್ತು, ಭಾಗ-3)	7-50	
116.	ಸಂತಾನೋತ್ಪತ್ತಿ ಶರೀರಕ್ರಿಯಾಶಾಸ್ತ್ರ	20–00	30–00
117.	ಲವಂಗ	3–50	
118.	ಸೂಕ್ಷ್ಮಜೀವಿಗಳ ಉತ್ಪರಿವರ್ತನೆ ಹಾಗೂ ಅನುವಂಶೀಯ ಗುಣಗಳ ಪುನರ್ ಸಂಯೋಜನೆ (ಸೂಕ್ಷ್ಮಜೀವಿ ಜಗತ್ತು, ಭಾಗ-4)	15–00	
119.	ಬ್ಯಾಕ್ಟೀರಿಯಾಗಳ ವರ್ಗೀಕರಣ ಮತ್ತು ವಿವರಣೆ (ಸೂಕ್ಷ್ಮಜೀವಿ ಜಗತ್ತು, ಭಾಗ-5)	25–00	
120.	ಎಣ್ಣೆ ಕೊಡುವ ಕೆಲವು ಹೊಸ ಸಸ್ಯಗಳು	12–00	22-00
121.	ಸೂಕ್ಷ್ಮಜೀವಿಗಳ ಪರಿಸರಶಾಸ್ತ್ರ ಮತ್ತು ಸೋಂಕು ರಕ್ಷಣಾಶಾಸ್ತ್ರ (ಸೂಕ್ಷ್ಮಜೀವಿ ಜಗತ್ತು, ಭಾಗ-6)	20–00	
122.	ಕೃಷಿ ಯಂತ್ರಗಳು ಹಾಗೂ ಉಪಕರಣಗಳು		80-00
123.	ಸಸ್ಯಪೋಷಕಗಳು ಮತ್ತು ಅವುಗಳ ಪಾತ್ರ	10–00	20–00
124.	ಮೆಣಸು-ಕಪ್ಪುಹೊನ್ನು	9–00	19–00

		ಸಾದಾ	ಕ್ಯಾಲಿಕೊ
125.	ಮಾನವ ಕಲ್ಯಾಣಕ್ಕೆ ಸೂಕ್ಷ್ಮಜೀವಿಗಳ ಬಳಕೆ (ಸೂಕ್ಷ್ಮಜೀವಿ ಜಗತ್ತು, ಭಾಗ-7)	5-00	
126.	ಕೃಷಿ ಆರ್ಥಿಕ ವಿಶ್ಲೇಷಣೆ ಪ್ರವೇಶಿಕೆ	25-00	35-00
127.	ರೇಷ್ಮೆ ವ್ಯವಸಾಯ	20-00	30-00
128.	ಕೃಷಿ ಪ್ರಸರಣೆ	25-00	35-00
129.	ಹಣ್ಣಿನ ಬೆಳೆಗಳ ಕೀಟ ನಿಯಂತ್ರಣ	12-00	22 00
130.	ತ್ರಿಕೋನಮಿತಿ	15-00	25-00
131.	ಬಿದಿರು ಮತ್ತು ಬೆತ್ತ	10-00	20-00
132.	ಬತ್ತದ ಬೆಳೆ ಕೀಟ ನಿಯಂತ್ರಣ	6-00	
133.	ಇಪ್ಪತ್ತೊಂಬತ್ತನೆಯ ದಿನ	30-00	40-00
134.	ಮಣ್ಣಿನ ಭೌತಿಕ ಗುಣಧರ್ಮಗಳು	20-00	30-00
135.	ಆಧುನಿಕ ಆಹಾರ ಸೂಕ್ಷ್ಮಜೀವಿ ವಿಜ್ಞಾನ		60-00
136.	ಸುಗಂಧದ್ರವ್ಯ ಸಸ್ಯಗಳು	12–50	22-50
137.	ಸೂಕ್ಷ್ಮಜೀವಿ ಜಗತ್ತು		130-00
138.	ಜೀವಶಾಸ್ತ್ರ ಪಾರಿಭಾಷಿಕ ಶಬ್ದಕೋಶ	2-50	
139.	ಪ್ಲಾಂಟೇಶನ್ ಬೆಳೆಗಳ ಕೀಟಹತೋಟಿ	14-00	24-00
140.	ಪ್ರಾಚೀನ ಭಾರತದಲ್ಲಿ ಬೇಸಾಯ	ಅಚ್ಚಿನಲ್ಲಿದೆ	
141.	ಪ್ರಾಚೀನ ಹಾಗೂ ಅರ್ವಾಚೀನ ದಿನಗಳ ಇತಿಹಾಸ	24-00	34-00
142.	ಬೀಜಗಣಿತ ಪರಿಚಯ, ಭಾಗ-2	20-00	30-00
143.	ಸಾಗುವಳಿ ಉಪಕರಣಗಳು	15-00	25-00
144.	ಮಾವು	40-00	50-00
145.	ಬತ್ತ	40-00	50-00
146.	ಬತ್ತದ ಬೇಸಾಯ ಸಮಸ್ಯೆ-ಹಾಗೂ ಪರಿಹಾರಗಳು	18-00	28-00
147.	ಬೆಳೆಗಳ ಪ್ರಾಣಿ ಪೀಡೆಗಳು	50-00	60-00
148.	ಭಾರತದ ಸಂಬಾರದ ಬೆಳೆಗಳು	18-00	28-00
149.	ಸಜೀವ ಸಸ್ಯ	ಅಚ್ಚಿನಲ್ಲಿದೆ	
150.	ಕೃಷಿ ಸಮಾನ ಪದಗಳ ಸಮೀಕ್ಷೆ	5-00	
151.	ಕೃಷಿ ವಿಜ್ಞಾನ ಕನ್ನಡ ಪುಸ್ತಕಗಳ ಸಮೀಕ್ಷೆ	5-00	
152.	ವನ್ಯಪ್ರಾಣಿಗಳ ವಿಕಸನ ಹಾಗೂ ವಿತರಣೆ	ಅಚ್ಚಿನಲ್ಲಿದೆ	